ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೦೭

ಪಟ್ಟಿ – ೧೩

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತಮೂರನೆಯ ಅಧಿವೇಶನ
(ಮುಂದುವರೆದ ಉಪವೇಶನ)

ಮಂಗಳವಾರ, ದಿನಾಂಕ : ೨೮ನೇ ಮಾರ್ಚ್, ೨೦೧೭

## ಸಮೂಹ – II

೧. ಇಂಧನ ಸಚಿವರು.

೨. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು.

೪. ಕೃಷಿ ಸಚಿವರು.

೫. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು.

೬. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

## ಹೈದ್ರಾಬಾದ್–ಕರ್ನಾಟಕದ ೬ ಜಿಲ್ಲೆಗಳಲ್ಲಿ ಲೆಕ್ಕಶೀರ್ಷಿಕೆ ೨೦೫೯, ೨೨೧೬, ೩೦೫೪ ಮತ್ತು ೫೦೫೪ ಗಳ ಕಾಮಗಾರಿಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೪೪ (೧೮೩೦) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕದ ಆರು ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ೨೦೫೯, ೨೨೧೬, ೩೦೫೪ ಮತ್ತು ೫೦೫೪ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳ ಗುತ್ತಿಗೆಗಳನ್ನು ನೀಡಲಾಗುತ್ತಿದೆಯೇ; ಹಾಗಿದ್ದರೆ, ಪಾರದರ್ಶಕತೆ ಕಾಯ್ದೆ ಅಡಿಯಲ್ಲಿ ಇ–ಪ್ರಕ್ಯೂರ್ಮೆಂಟ್ ಅಥವಾ ಮ್ಯಾನುವಲ್ ಟೆಂಡರ್ ಮೂಲಕ ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆಯೇ; (ಜಿಲ್ಲಾವಾರು ೨೦೧೩–೧೪ನೇ ಸಾಲಿನಿಂದ ವರ್ಷವಾರು ಮಾಹಿತಿ ನೀಡುವುದು)

(ಆ) ಸದರಿ ಇಲಾಖೆಯಲ್ಲಿ ೨೦೫೯, ೨೨೧೬, ೩೦೫೪ ಮತ್ತು ೫೦೫೪ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ೨೦೧೩–೧೪ ರಿಂದ ನಡೆದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಲೆಕ್ಕಶೀರ್ಷಿಕೆವಾರು, ಜಿಲ್ಲಾವಾರು ಆದಂತಹ ಅಕ್ರಮಗಳ ಬಗ್ಗೆ ಸವಿವರ ಮಾಹಿತಿ ನೀಡುವುದು) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಜಿಲ್ಲಾವಾರು, ಲೆಕ್ಕಶೀರ್ಷಿಕೆವಾರು, ಪ್ರಕರಣಗಳ ಬಗ್ಗೆ ಮಾಹಿತಿ ನೀಡುವುದು)

(ಇ) ಸದರಿ ಟೆಂಡರ್‌ಗಳಲ್ಲಿನ ಅಕ್ರಮಗಳ ಬಗ್ಗೆ ಇಲಾಖೆಯ ಕಾಮಗಾರಿ ಉಸ್ತುವಾರಿ ಕೋಶ ವರದಿ ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದರೆ, ವರದಿಯ ವಿವರ ನೀಡುವುದು)

(ಈ) ಸದರಿ ಟೆಂಡರ್ ಗೋಲ್‌ಮಾಲ್/ ಅಕ್ರಮಗಳಲ್ಲಿ ಭಾಗಿಯಾದಂತಹ ವ್ಯಕ್ತಿಗಳು ಯಾರು ಹಾಗೂ ಈ ತಪ್ಪಿತಸ್ಥ ವ್ಯಕ್ತಿಗಳ ಮೇಲೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ಜೆಸ್ಕಾಂನಲ್ಲಿ ಲೈನ್‌ಮನ್ ಮಧುರಾಯ ಎಂಬ ಯುವಕ ವಿದ್ಯುತ್ ಅವಘಡದಿಂದ ಮೃತನಾಗಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೪೫ (೧೮೩೨) ಮಾನ್ಯ ಇಂಧನ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ದಿನಾಂಕ: ೦೧–೦೨–೨೦೧೭ ರಂದು ಕಲಬುರಗಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ (ಜೆಸ್ಕಾಂ) ಲೈನ್‌ಮನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಅಫಜಲಪೂರ ತಾಲ್ಲೂಕಿನ ಮಣ್ಣೂರು ಗ್ರಾಮದ ೨೧ ವರ್ಷದ ಯುವಕನು ವಿದ್ಯುತ್ ಅವಘಡದಿಂದ ಪ್ರಾಣಕಳೆದುಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂತ್ರಸ್ಥನ ಕುಟುಂಬಕ್ಕೆ ಸರ್ಕಾರದಿಂದ ನೀಡಲಾದ ಪರಿಹಾರ ಮೊತ್ತ ಎಷ್ಟು; ಅನುಕಂಪದ ಆಧಾರದ ಮೇಲೆ ಕುಟುಂಬದ ಅರ್ಹ ಸದಸ್ಯನಿಗೆ ಉದ್ಯೋಗ ನೀಡಲಾಗಿದೆಯೇ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ರಸ್ತೆಗಳಿಗೆ ಹಂಪ್ಸ್ (ರಸ್ತೆ ಉಬ್ಬು) ಗಳ ನಿರ್ಮಾಣದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೪೬ (೧೮೩೧) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರಸ್ತೆಗಳಿಗೆ ಅವೈಜ್ಞಾನಿಕವಾಗಿ ಹಂಪ್ಸ್‌ಗಳನ್ನು (ರಸ್ತೆ ಉಬ್ಬು) ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಎಷ್ಟು ಹಂಪ್ಸ್‌ಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ, (ಅಳತೆ ಸಹಿತ ವಿವರ ನೀಡುವುದು) ರಸ್ತೆಗಳಿಗೆ ಹಂಪ್ಸ್‌ಗಳನ್ನು ನಿರ್ಮಿಸುವ ಉದ್ದೇಶವೇನು;

(ಆ) ರಾಜ್ಯದಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಲಾದ ಹಂಪ್ಸ್‌ಗಳಿಂದ (ರಸ್ತೆ ಉಬ್ಬು) ಆದಂತಹ ಅಪಘಾತಗಳು ಹಾಗೂ ಜೀವಹಾನಿಗಳ ಸಂಖ್ಯೆ ಎಷ್ಟು; ಸರ್ಕಾರದ ಗಮನಕ್ಕೆ ಬಂದ ನಂತರ ತೆರವುಗೊಳಿಸಲಾದ ಹಂಪ್ಸ್‌ಗಳ ಸಂಖ್ಯೆ ಎಷ್ಟು; (ಕಳೆದ ಮೂರು ವರ್ಷಗಳ ವರ್ಷವಾರು, ಸ್ಥಳವಾರು, ಅಪಘಾತ ಹಾಗೂ ಜೀವಹಾನಿ ಪ್ರಕರಣವಾರು ಮಾಹಿತಿ ನೀಡುವುದು)

(ಇ) ಈ ಅವೈಜ್ಞಾನಿಕ ಹಂಪ್‌ಗಳಿಂದ (ರಸ್ತೆ ಉಬ್ಬು) ಇಡೀ ದೇಶದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಅಪಘಾತಗಳು ಹಾಗೂ ಸಾವು ನೋವುಗಳು ಸಂಭವಿಸುತ್ತಿರುವುದು ನಿಜವೇ, ಇದ್ದರೆ, ಕಳೆದ ಮೂರು ವರ್ಷದ ಹೆಚ್ಚಿನ ಅಪಘಾತ ಹಾಗೂ ಜೀವಹಾನಿಗಳು ಸಂಭವಿಸಿದ ರಾಜ್ಯಗಳು ಯಾವುವು; (ವರ್ಷವಾರು, ರಾಜ್ಯವಾರು ಮಾಹಿತಿ ನೀಡುವುದು)

(ಈ) ಈ ಅವೈಜ್ಞಾನಿಕ ಹಂಪ್ಸ್‌ಗಳನ್ನು (ರಸ್ತೆ ಉಬ್ಬು) ಸರಿಪಡಿಸುವ ದೃಷ್ಟಿಯಿಂದ, ಇಂಡಿಯನ್ ರೋಡ್ಸ್ ಕಾಂಗ್ರೇಸ್‌ನ ಶಿಫಾರಸ್ಸುಗಳೇನು; ಹಾಗೂ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)

## ಕೃಷಿ ಇಲಾಖೆಯಲ್ಲಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹಾಗೂ "ಕೃಷಿ ತಾಂತ್ರಿಕ ಇಲಾಖೆ" ಸ್ಥಾಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೪೭ (೧೮೩೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಹುದ್ದೆಗಳ ಭರ್ತಿಗಾಗಿ ದಿನಾಂಕ: ೦೮–೦೨–೨೦೧೭ ರಂದು ಅಧಿಸೂಚನೆ ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಹುದ್ದೆಗಳಿಗೆ ಯಾವ ಯಾವ ಪದವಿಗಳನ್ನು ಪರಿಗಣಿಸಲಾಗಿದೆ; (ಹುದ್ದೆವಾರು ಪರಿಗಣಿಸಲಾದ ಪದವಿಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಅಧಿಸೂಚನೆಯಲ್ಲಿ ಕೃಷಿ ತಾಂತ್ರಿಕ ಪದವಿಯನ್ನು ಕೈಬಿಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಈ ಹಿಂದಿನ ನೇಮಕಾತಿಗಳಲ್ಲಿ ಕೃಷಿ ತಾಂತ್ರಿಕ ಪದವಿಯನ್ನು ಪರಿಗಣಿಸಿ ಈಗ ಕೈಬಿಡಲು ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೃಷಿ ಇಲಾಖೆಯಲ್ಲಿ ತಂತ್ರಜ್ಞಾನ ಯಾಂತ್ರೀಕರಣದೊಂದಿಗೆ ಆಧುನೀಕರಣಗೊಳಿಸುವ ನಿಟ್ಟನಲ್ಲಿ ಇತರೆ ರಾಜ್ಯಗಳಲ್ಲಿ ಇರುವ ರೀತಿಯಲ್ಲಿ "ಕೃಷಿ ತಾಂತ್ರಿಕ ಇಲಾಖೆ" ಸ್ಥಾಪಿಸಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ಕೊಪ್ಪಳ ಜಿಲ್ಲೆಯ ಬೂದಗುಂಪಾ, ಗಂಗಾವತಿ ಮತ್ತು ಸಿಂಧನೂರ ರಸ್ತೆ ಟೋಲ್‌ಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೪೮ (೧೮೩೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ಜಿಲ್ಲೆಯ ಬೂದಗುಂಪಾ, ಗಂಗಾವತಿ ಹಾಗೂ ಸಿಂಧನೂರ ರಸ್ತೆಯಲ್ಲಿ ಇರುವ ಟೋಲ್‌ಗಳ ಸಂಖ್ಯೆ ಎಷ್ಟು; ಟೋಲ್‌ಗಳ ಮಧ್ಯವಿರುವ ಅಂತರ ಎಷ್ಟು; (ರಸ್ತೆ ಹಾಗೂ ಟೋಲ್‌ಗಳ ಗುತ್ತಿಗೆ ಅವಧಿ ಹಾಗೂ ಮೊತ್ತದ ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಸದರಿ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ಕಡಿಮೆ ಅಂತರದಲ್ಲಿ ಟೋಲ್‌ಗೇಟ್ ನಿರ್ಮಿಸಿದ್ದು, ನಾಗರಿಕರಿಗೆ ಹೊರೆ ಹಾಗೂ ಅನಾನುಕೂಲತೆ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಇದರ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಎ.ಪಿ.ಎಂ.ಸಿ. ಗಳಿಂದ ತೂಕ ದಾಖಲಾತಿದಾರರ ವೇತನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೪೪ (೧೮೮೨) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಎ.ಪಿ.ಎಂ.ಸಿಗಳಲ್ಲಿ ಕಳೆದ ೨೦ ವರ್ಷಗಳಿಂದ ಸತತವಾಗಿ ಕಾರ್ಯನಿರ್ವಹಿಸುತ್ತಿರುವ ತೂಕ ದಾಖಲಾತಿದಾರರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಕಾರ್ಮಿಕರಿಗೆ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯ ಪ್ರಕಾರ ಕನಿಷ್ಠ ವೇತನ ₹. ೭೫೦೦/- ನೀಡುವ ಬಗ್ಗೆ ಕಾರ್ಮಿಕ ಇಲಾಖೆಯು ಅಧಿಸೂಚನೆ ಸಂಖ್ಯೆ ಕಾಇ:೪೯:ಎಲ್ಎಮ್‌ಡಬ್ಲ್ಯೂ: ೨೦೦೮, ಬೆಂಗಳೂರು ದಿನಾಂಕ: ೦೪-೦೭-೨೦೧೭ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿರುವುದು ನಿಜವೇ; (ಪ್ರತಿ ಒದಗಿಸುವುದು)

(ಇ) ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿರುವ ಆದೇಶವನ್ನು ಅನುಷ್ಠಾನಗೊಳಿಸಲಾಗಿದೆಯೇ; ಅನುಷ್ಠಾನಗೊಳಿಸದಿದ್ದಲ್ಲಿ ಕಾರಣಗಳೇನು; ಇದಕ್ಕೆ ಹೊಣೆ ಯಾರು; (ತಪ್ಪಿತಸ್ಥ ಅಧಿಕಾರಿಗಳ ವಿವರ ನೀಡುವುದು)

(ಈ) ರಾಜ್ಯ ಉಚ್ಚನ್ಯಾಯಲಯವು ದಿನಾಂಕ: ೧೧-೦೪-೪೯೬ರಂದು ರಿಟ್ ಅಪೀಲ್ ನಂ: ೩೫೫೪:೪೯೫ ಹಾಗೂ ದಿನಾಂಕ: ೨೮/೦೨/೪೯೬ರಂದು ಕನಿಷ್ಠ ವೇತನ ನೀಡಲು

ಆದೇಶಿಸಿದ್ದರೂ ಸಹ ಇದುವರೆವಿಗೂ ನ್ಯಾಯಾಲಯ ಆದೇಶಿಸಿದ್ದರೂ ಸಹ ಇದುವರೆವಿಗೂ ನ್ಯಾಯಾಲಯ ಆದೇಶ ಚಾಲನೆ ಮಾಡದೇ ೩೫ ಜನ ತೂಕದಾರರಿಗೆ ವೇತನ ನೀಡದಿರುವುದು ನಿಜವೇ? (ವಿವರ ನೀಡುವುದು)

## ಫಸಲ್ ಭೀಮಾ ವಿಮಾ ಯೋಜನೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೦ (೧೮೮೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಪ್ರಾರಂಭಿಸಿರುವ ಫಸಲ್ ಭೀಮಾ ವಿಮಾ ಯೋಜನೆಯಡಿ ಆಯ್ಕೆಗೊಂಡಿರುವ ಕಂಪನಿಗಳು ಎಷ್ಟು; ಯಾವ ಮಾನದಂಡಗಳನ್ನು ಅನುಸರಿಸಿ ಆಯ್ಕೆ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಯೋಜನೆಯಡಿ ನೋಂದಾಯಿತವಾಗಿರುವ ರೈತರ ಸಂಖ್ಯೆ ಎಷ್ಟು ; (ಮಂಡ್ಯ ಜಿಲ್ಲೆ, ತಾಲ್ಲೂಕುವಾರು ರೈತರ ಹೆಸರು, ವಿಳಾಸದೊಂದಿಗೆ ಮಾಹಿತಿ ಒದಗಿಸುವುದು)

(ಇ) ಸದರಿ ಯೋಜನೆಯಡಿ ನೋಂದಾಯಿತ ರೈತರ ಬೆಳೆ ಹಾನಿಯಾಗಿದ್ದರೆ, ಅವರಿಗೆ ಪಾವತಿಸಿದ ವಿಮೆ ಮೊತ್ತ ಎಷ್ಟು ; (ಮಂಡ್ಯ ಜಿಲ್ಲೆ, ತಾಲ್ಲೂಕುವಾರು ವಿಮೆ ಪಡೆದವರ ವಿವರ ನೀಡುವುದು)

(ಈ) ನೋಂದಾಯಿತ ರೈತರ ಪೈಕಿ ಎಷ್ಟು ರೈತರ ಬೆಳೆ ಹಾನಿಯಾಗಿದೆ; (ಮಂಡ್ಯ ಜಿಲ್ಲೆ, ತಾಲ್ಲೂಕುವಾರು ರೈತರ ವಿವರದ ಜೊತೆಗೆ ಬೆಳೆವಾರು ವಿವರ ನೀಡುವುದು)

(ಉ) ಈ ಯೋಜನೆಯಡಿ ರೈತರಿಂದ ಸರ್ಕಾರಕ್ಕೆ ಜಮೆ ಆಗಿರುವ ಮೊತ್ತ ಎಷ್ಟು; ರೈತರಿಗೆ ಪಾವತಿಸಿದ ವಿಮೆ ಮೊತ್ತ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ರೈತರಿಗೆ ನೀಡಿರುವ ಟಾರ್ಪಲ್‌ಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೧ (೧೮೮೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಇಲಾಖಾ ವತಿಯಿಂದ ರಾಜ್ಯದಲ್ಲಿ ಎಷ್ಟು ರೈತ ಫಲಾನುಭವಿಗಳಿಗೆ ಟಾರ್ಪಲ್ ಗಳನ್ನು ನೀಡಲಾಗಿದೆ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಡ್ಯ ಜಿಲ್ಲೆಯಲ್ಲಿ ಎಷು ರೈತರಿಗೆ ಟಾರ್ಪಲ್‌ಗಳನ್ನು ನೀಡಲಾಗಿದೆ; ಮದ್ದೂರು ತಾಲ್ಲೂಕಿನಲ್ಲಿ ಎಷ್ಟು ರೈತರಿಗೆ ನೀಡಲಾಗಿದೆ? (ತಾಲ್ಲೂಕುವಾರು, ಹೋಬಳಿವಾರು ಮತ್ತು ಸರ್ವೆ ನಂಬರ್‌ಗಳನ್ನೊಳಗೊಂಡ ಮಾಹಿತಿ ಒದಗಿಸುವುದು)

## ಬೆಂಗಳೂರು –ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಉದ್ದ– ಅಗಲಳತೆಯ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೨ (೧೮೭೮) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯು ಎಷ್ಟು ಕಿ.ಮೀ. ಉದ್ದವನ್ನು ಹೊಂದಿರುತ್ತದೆ;

(ಆ) ಈ ರಾಷ್ಟ್ರೀಯ ಹೆದ್ದಾರಿ ಅಗಲ ಮತ್ತು ಅಳತೆ ಎಷ್ಟು; (ಮಾಹಿತಿ ನೀಡುವುದು)

(ಇ) ಈ ರಾಷ್ಟ್ರೀಯ ಹೆದ್ದಾರಿಯ ಅಗಲಳತೆಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; (ವಿವರ ನೀಡುವುದು)

(ಈ) ಈ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಸಾರ್ವಜನಿಕರ ಮತ್ತು ರೈತರ ಜಮೀನು ಇರುವುದರಿಂದ ಇವರುಗಳಿಗೆ ಈ ಹೆದ್ದಾರಿಯ ನಿರ್ದಿಷ್ಟ ಅಗಲಳತೆಯನ್ನು ಗುರುತಿಸಿ, ಸಾರ್ವಜನಿಕರ ಮತ್ತು ರೈತರ ಜಮೀನುಗಳಿಗೆ ಬೇಲಿ ಹಾಕಿಕೊಳ್ಳಲು ಸರ್ಕಾರ ಅನುಕೂಲ ಮಾಡಿಕೊಡುವುದೇ? (ವಿವರ ನೀಡುವುದು)

## ಪಶು ವೈದ್ಯಕೀಯ ಕೇಂದ್ರ/ ಸಿಬ್ಬಂದಿಗಳ ಮಾಹಿತಿ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೩ (೧೮೨೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಇರುವ ಪಶು ವೈದ್ಯ ಕೇಂದ್ರಗಳ ಸಂಖ್ಯೆ ಎಷ್ಟು;

(ಆ) ಪಶು ವೈದ್ಯ ಕೇಂದ್ರಗಳಿಗೆ ಮಂಜೂರಾದ ವೈದ್ಯರು ಮತ್ತು ವೈದ್ಯರೇತರ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

(ಇ) ಖಾಲಿ ಇದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಭರ್ತಿ ಮಾಡಿಕೊಳ್ಳಲಾಗುವುದು?

## ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೪ (೧೮೨೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ ತಾಂತ್ರಿಕ ವಿದ್ಯಾರ್ಥಿಗಳು ಮುಷ್ಕರ (Protest) (Agriculture Engineering Students) ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ತೆಗೆದುಕೊಳ್ಳುವ ಕ್ರಮವೇನು;

(ಇ) ಕೃಷಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೇ; ಉದ್ದೇಶಿಸಿದ್ದಲ್ಲಿ, ತೆಗೆದುಕೊಂಡ ಕ್ರಮವೇನು?

## ನಗರಸಭೆ ವ್ಯಾಪ್ತಿಯಲ್ಲಿ ಖಾಲಿ ನಿವೇಶನ ಕಟ್ಟಡ ಗುತ್ತಿಗೆ ಅವಧಿ ನೀಡಿರುವ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೫ (೧೮೨೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕರ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ನಗರಸಭೆಗಳಲ್ಲಿ ಸರ್ಕಾರಿ ಬೆಲೆ ಬಾಳುವ ಸ್ವತ್ತುಗಳನ್ನು (ಖಾಲಿ ನಿವೇಶನ ಹಾಗೂ ಕಟ್ಟಡ) ಇದುವರೆಗೂ ಎಷ್ಟು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ;

(ಆ) ಈ ಸ್ವತ್ತುಗಳನ್ನು ಯಾರಿಗೆ ಹಾಗೂ ಎಷ್ಟು ಅವಧಿಗೆ ಗುತ್ತಿಗೆಗೆ ನೀಡಲಾಗಿದೆ; (ಅಳತೆ ಹಾಗೂ ವಿಳಾಸದೊಂದಿಗೆ ವಿವರ ನೀಡುವುದು)

(ಇ) ಸ್ವತ್ತುಗಳನ್ನು ಗುತ್ತಿಗೆಗೆ ನೀಡಿದ್ದಲ್ಲಿ ಯಾವ ವರ್ಷದಲ್ಲಿ ನೀಡಲಾಗಿತ್ತು; ಗುತ್ತಿಗೆ ಉದ್ದೇಶ ಮತ್ತು ಗುತ್ತಿಗೆಗೆ ನೀಡುತ್ತಿರುವ ವಾರ್ಷಿಕ ಅಥವಾ ಮಾಸಿಕ ಹಣ ಎಷ್ಟು ಹಾಗೂ ಗುತ್ತಿಗೆ ಅವಧಿ ಎಷ್ಟು; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಸರ್ಕಾರಿ ಸ್ವತ್ತುಗಳ ಗುತ್ತಿಗೆ ಅವಧಿ ಮುಗಿದಿದ್ದರೂ ಕೂಡಾ ಮರಳಿ ಸರ್ಕಾರದ ವಶಕ್ಕೆ ನೀಡದ ಪ್ರಕರಣಗಳೆಷ್ಟು; ಅವು ಯಾವುವು; (ಗುತ್ತಿಗೆದಾರರ ಹೆಸರು, ವಿಳಾಸ, ಸ್ವತ್ತಿನ ವಿಳಾಸ ಸಮೇತ ಜಿಲ್ಲಾವಾರು ವಿವರ ನೀಡುವುದು)

(ಉ) ರಾಜ್ಯದಲ್ಲಿ ಸರ್ಕಾರಿ ಸ್ವತ್ತುಗಳನ್ನು ಯಾವ ಯಾವ ಉದ್ದೇಶಕ್ಕಾಗಿ ಗುತ್ತಿಗೆ ಆಧಾರದಲ್ಲಿ ನೀಡಲಾಗುತ್ತಿದೆ ; ಅರ್ಜಿ ಸಲ್ಲಿಸಲು ಇರುವ ಅರ್ಹತೆಗಳೇನು ; ಆ ಪೈಕಿ ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು ?

## ಪಶು ಆಹಾರ ಸರಬರಾಜು

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫೬ (೧೮೪೧) ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ತೀವ್ರ ಬರಗಾಲ ಪರಿಸ್ಥಿತಿಯಿಂದಾಗಿ ಪಶುಗಳಿಗೆ ಆಹಾರದ ಕೊರತೆ ಉಂಟಾಗಿದ್ದು, ಪಶುಗಳಿಗೆ ಆಹಾರ ಒದಗಿಸಲು ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಪಶು ಆಹಾರ ಒದಗಿಸಲು ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು; (ವಿವರ ನೀಡುವುದು)

(ಇ) ಎಲ್ಲೆಲ್ಲಿ ಗೋಶಾಲೆಗಳನ್ನು ತೆರೆಯಲಾಗಿದೆ; ಈ ಗೋಶಾಲೆಗಳಿಗೆ ಆಹಾರ ಒದಗಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

## ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವಿಚಾರ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫೭ (೧೮೪೦) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ–೨ ಮತ್ತು ಹಂತ–೩ರಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು ಯಾವುವು; (ವಿವರ ನೀಡುವುದು)

(ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಇ) ಈ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳ್ಳಲಿದೆ? (ವಿವರ ನೀಡುವುದು)

## ರಾಯಚೂರು ಜಿಲ್ಲೆಗೆ ಸರಬರಾಜಾಗಿರುವ ರಸಗೊಬ್ಬರ ಬಿತ್ತನೆ ಬೀಜಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೫೮ (೧೮೫೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ರಲ್ಲಿ ರಾಯಚೂರು ಜಿಲ್ಲೆಗೆ ಸರಬರಾಜಾಗಿರುವ ವಿವಿಧ ರಾಸಾಯನಿಕ ಗೊಬ್ಬರಗಳ ಪ್ರಮಾಣ ಎಷ್ಟು; ಇಲ್ಲಿಯವರೆಗೂ ಎಷ್ಟು ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ಗೊಬ್ಬರಗಳನ್ನು ಸರಬರಾಜು ಮಾಡಲಾಗಿದೆ; (ವಿವರ ನೀಡುವುದು)

(ಆ) ೨೦೧೬–೧೭ರಲ್ಲಿ ರಾಯಚೂರು ಜಿಲ್ಲೆಗೆ ಸರಬರಾಜು ಮಾಡಿರುವ ವಿವಿಧ ಬಿತ್ತನೆ ಬೀಜಗಳಿಗೆ ಸರ್ಕಾರದ ವತಿಯಿಂದ ನೀಡಿರುವ ಸಬ್ಸಿಡಿ ಹಣ ಎಷ್ಟು? (ವಿವರ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿರುವ YTPS, ನೀರಾವರಿ ಪಂಪ್‌ಸೆಟ್‌ಗಳು, ಸಬ್‌ಸ್ಟೇಷನ್‌ಗಳ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೫೯ (೧೮೫೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ತಾಲ್ಲೂಕಿನ ಮಲ್ಲಟ ಗ್ರಾಮದ ಹತ್ತಿರ ನಿರ್ಮಾಣ ಹಂತದಲ್ಲಿರುವ ೨೨೦ ಕೆ.ವಿ. ಸಬ್ ಸ್ಟೇಷನ್ಸ್‌ಗಳು ಕಾಮಗಾರಿ ನಿಗದಿತ ಸಮಯದಲ್ಲಿ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಯಚೂರು ತಾಲ್ಲೂಕಿನಲ್ಲಿ ಬರುವ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು; ಸದರಿ ಪಂಪ್‌ಸೆಟ್‌ಗಳಿಗೆ ದಿನದ ೨೪ ಘಂಟೆ ವಿದ್ಯುತ್ ಸರಬರಾಜು ಮಾಡಿದರೆ ಬೇಕಾಗುವ ವಿದ್ಯುತ್ ಪ್ರಮಾಣ ಎಷ್ಟು; (ವಿವರ ನೀಡುವುದು)

(ಇ) ರಾಯಚೂರು ಜಿಲ್ಲೆಯ ಚಿಕ್ಕಸೂಗೂರು ಗ್ರಾಮದಲ್ಲಿ YTPS, ಗೆ ಹೋಗಿರುವ ವಾಟರ್‌ಲೈನ್ ಮತ್ತು ಆ್ಯಶ್ ಲೈನ್ (ಬೂದಿಲೈನ್) ಗಳಿಗೆ ಮನೆಗಳು ಮತ್ತು ಖಾಲಿ ನಿವೇಶನಗಳು, ಕಳೆದುಕೊಂಡಿರುವ ಸಂತ್ರಸ್ತರುಗಳ ಕುಟುಂಬಗಳ ಬೇಡಿಕೆಯಂತೆ ಸೂಕ್ತ ಪರಿಹಾರ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ರಾಯಚೂರು ಜಿಲ್ಲೆಯಲ್ಲಿರುವ YTPS, ನಲ್ಲಿ ಸರ್ಕಾರದ ಆದೇಶ ಪ್ರಕಾರ ೧೯೯೫ರಲ್ಲಿ ೧೨೧ ಕುಟುಂಬಗಳು ಹಾಗೂ ೨೦೦೯ರಲ್ಲಿ ೧೩೮ ಕುಟುಂಬಗಳ ಭೂ ಸಂತ್ರಸ್ತರುಗಳಿಗೆ ಉದ್ಯೋಗ ಅವಕಾಶ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಉ) ಇಲ್ಲಿಯವರೆಗೂ ಎಷ್ಟು ಭೂಸಂತ್ರಸ್ತರುಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಡಲಾಗಿದೆ; ಇನ್ನು ಬಾಕಿ ಉಳಿದಿರುವ ಭೂಸಂತ್ರಸ್ತರುಗಳಿಗೆ ಉದ್ಯೋಗವಾಕಾಶ ಪೂರ್ಣಗೊಳಿಸಲು ತೆಗೆದುಕೊಳ್ಳುವ ಕಾಲಮಿತಿ ಅವಧಿ ಎಷ್ಟು; (ವಿವರ ನೀಡುವುದು)

(ಊ) ರಾಯಚೂರು ಜಿಲ್ಲೆಯಲ್ಲಿ ನೂತನವಾಗಿ ಸಬ್‌ಸ್ಟೇಷನ್‌ಗಳ ನಿರ್ಮಾಣ ಮಾಡಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ; ಹಾಗಿದ್ದಲ್ಲಿ , ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರು ಜಿಲ್ಲೆಯ ವಿವಿಧ ರಸ್ತೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೬೦ (೧೮೫೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಿ೦೧೩–೧೪ರಿಂದ ೨೦೧೬–೧೭ರವರೆಗೂ ರಾಯಚೂರು ಜಿಲ್ಲೆಗೆ ವಿವಿಧ ರಸ್ತೆಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳ ಮುಖಾಂತರ ಮಂಜೂರಾತಿಗಿರುವ ಅನುದಾನ ಎಷ್ಟು; ಇಲ್ಲಿಯವರೆಗೆ ಎಷ್ಟು ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಲಾಗಿದೆ? (ವಿವರ ನೀಡುವುದು)

## ರಾಯಚೂರು ಜಿಲ್ಲೆಯ ವಿವಿಧ ಕೃಷಿ ಮಾರುಕಟ್ಟೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೬೧ (೧೮೫೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬-೧೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿರುವ ವಿವಿಧ ಕೃಷಿ ಮಾರುಕಟ್ಟೆಗಳ (APMC) ಮುಖಾಂತರ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು;

(ಆ) ೨೦೧೬-೧೭ರಲ್ಲಿ 'ನಬಾರ್ಡ್' ಯೋಜನೆಯ ಮುಖಾಂತರ ರಾಯಚೂರು ಜಿಲ್ಲೆಗೆ ವಿವಿಧ ಕೃಷಿ ಮಾರುಕಟ್ಟೆಗಳಿಗೆ ನೀಡಿರುವ ಅನುದಾನ ಎಷ್ಟು?

## ನೆರೆಯ ರಾಜ್ಯಗಳಿಗೆ ಮೇವು ಸಾಗಿಸುವುದನ್ನು ನಿರ್ಭಂಧಿಸುವ ಕುರಿತು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೯೬೨ (೧೮೭೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕಿನ ಯಾದವಾಡ ಗ್ರಾಮದಲ್ಲಿ ದಿನನಿತ್ಯ ನೂರಾರು ಟ್ರಕ್‌ಗಟ್ಟಲೆ ರೈತರು ಬೆಳೆದ ಬಿಳಿಜೋಳದ ಮೇವನ್ನು ಮೇವು ಕತ್ತರಿಸುವ ಯಂತ್ರದ ಮೂಲಕ ಕತ್ತರಿಸಿ ಮಹಾರಾಷ್ಟ್ರದ ಬೇರೆ ಬೇರೆ ಪ್ರದೇಶಗಳಿಗೆ ದಿನನಿತ್ಯ ಸೊಪ್ಪನ್ನು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಯಾದವಾಡದಲ್ಲಿ ಮೇವನ್ನು ಕತ್ತರಿಸಿ ಕುಟ್ಟಿ ಮಾಡುವ ಎಷ್ಟು ಯಂತ್ರಗಳಿವೆ; ಈ ಯಂತ್ರಗಳಿಂದ ದಿನನಿತ್ಯ ಎಷ್ಟು ಮೇವನ್ನು ಕತ್ತರಿಸಿ ನೆರೆ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ;

(ಇ) ಈ ಯಂತ್ರಗಳು ಕಾರ್ಯನಿರ್ವಹಿಸಲು ಸರ್ಕಾರದಿಂದ ಅನುಮತಿ ಪಡೆದಿವೆಯೇ; ಪಡೆದಿದ್ದಲ್ಲಿ, ಎಷ್ಟು ಯಂತ್ರಗಳು ಪಡೆದಿವೆ;

(ಈ) ಬಂದಿದ್ದರೆ, ಸರ್ಕಾರ ಇದನ್ನು ತಡೆಯಲು ಯಾವ ಕ್ರಮ ಕೈಗೊಂಡಿದೆ; ಈ ಹಿಂದೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುಗಾಗಿ ಸದನದಲ್ಲಿ ಹೇಳಿದ ನಂತರವೂ ಇನ್ನುವರೆಗೆ ಮೇವು ಸಾಗಿಸುತ್ತಿರುವುದನ್ನು ಸರ್ಕಾರ ತಡೆಯದಿರಲು ಕಾರಣಗಳೇನು;

(ಉ) ರಾಜ್ಯದಲ್ಲಿ ಭೀಕರ ಬರಗಾಲವಿರುವುದರಿಂದ ಮಧ್ಯವರ್ತಿಗಳು ರೈತರಿಂದ ಖರೀದಿಸಿದ ಮೇವನ್ನು ನೆರೆಯ ರಾಜ್ಯಗಳಿಗೆ ಅನಧಿಕೃತವಾಗಿ ಸಾಗಿಸುವುದನ್ನು ನಿರ್ಭಂಧಿಸಲು ಸರ್ಕಾರ ಆದೇಶ ಹೊರಡಿಸಿದೆಯೇ;

(ಊ) ಹೊರಡಿಸಿದ್ದಲ್ಲಿ, ಈಗಲೂ ಮೇವನ್ನು ನೆರೆಯ ರಾಜ್ಯಗಳಿಗೆ ಸಾಗಿಸುವವರ ವಿರುದ್ಧ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

## ಬೆಂಬಲ ಬೆಲೆಯಲ್ಲಿ ರಾಜ್ಯದ ರೈತರಿಂದ ಖರೀದಿಸಿದ ಉಳ್ಳಾಗಡ್ಡಿಯ (ಈರುಳ್ಳಿ) ಬಾಕಿ ಪಾವತಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೯೬೩ (೧೮೭೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ರೈತರಿಂದ ಬೆಂಬಲ ಬೆಲೆ ಯೋಜನೆಯಡಿ ಎಷ್ಟು ಪ್ರಮಾಣದ ಈರುಳ್ಳಿಯನ್ನು ಖರೀದಿಸಲಾಗಿದೆ;

(ಆ) ರೈತರಿಂದ ಖರೀದಿಸಿದ ಈರುಳ್ಳಿಗೆ ನೀಡಬೇಕಾದ ಬಾಕಿ ಹಣ ಎಷ್ಟು;

(ಇ) ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ಇಲ್ಲಿಯವರೆಗೆ ಪಾವತಿಸದಿರಲು ಕಾರಣಗಳೇನು;

(ಈ) ಭೀಕರ ಬರಗಾಲದ ಬವಣೆಯಲ್ಲಿರುವ ರೈತರಿಗೆ ಬಾಕಿ ಹಣ ನೀಡಿದಲ್ಲಿ ಅವರಿಗೆ ಸಹಾಯಕವಾಗುವುದೆಂಬುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳದಿರಲು ಕಾರಣಗಳೇನು;

(ಉ) ಬಾಕಿ ಹಣವನ್ನು ಯಾವ ದಿನಾಂಕದೊಳಗೆ ಪಾವತಿಸಲಾಗುವುದು ?

## ಡಾ : ಹೆಚ್. ಬಸವರಾಜು ವರದಿಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೯೬೪ (೧೭೭೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು ಹಾಗೂ ರೀಲರುಗಳಿಗೆ ರಕ್ಷಣೆ ಒದಗಿಸುವ ಸಲುವಾಗಿ ಡಾ: ಹೆಚ್. ಬಸವರಾಜು ವರದಿಯನ್ನು ಅನುಷ್ಠಾನಗೊಳಿಸಲಾಗಿದೆಯೇ;

(ಆ) ೨೦೧೬–೧೭ನೇ ಸಾಲಿನಲ್ಲಿ ರೇಷ್ಮೆ ಗೂಡು ಉತ್ಪಾದನೆಗಾಗಿ ಎಷ್ಟು ಹಣವನ್ನು ಪ್ರೋತ್ಸಾಹ ಧನವನ್ನಾಗಿ ಕೊಡಲಾಗಿದೆ;

(ಇ) ರೈತರು ಮತ್ತು ರೀಲರುಗಳ ಅನುಕೂಲಕ್ಕಾಗಿ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಲಾಗಿದೆಯೇ;

(ಈ) ಸ್ಥಾಪಿಸಲಾಗಿದ್ದರೆ, ಈ ನಿಧಿಗಾಗಿ ಬಿಡುಗಡೆ ಮಾಡಿದ ಹಣವೆಷ್ಟು?

## ಗ್ರಾಮೀಣ ಪ್ರದೇಶದ ವಿವಿಧ ಕೃಷಿ ಚಟುವಟಿಕೆಗಳು ಒಂದೇ ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೯೬೫ (೧೭೭೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮೀಣ ಪ್ರದೇಶದ ಮುಖ್ಯ ಕಸುಬಾದ ಕೃಷಿ ಚಟುವಟಿಕೆ ಅನೇಕ ಕಸುಬುಗಳನ್ನು ತನ್ನೊಂದಿಗೆ ಅಳವಡಿಸಿಕೊಂಡಿರುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯವು ಈ ಎಲ್ಲಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿರುವುದರಿಂದ ತೋಟಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ, ರೇಷ್ಮೆ, ಮೀನುಗಾರಿಕೆ ಹಾಗೂ ಇನ್ನಿತರ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳು ಒಂದೇ ವಿಶ್ವವಿದ್ಯಾಲಯದ ಅಧೀನದಲ್ಲಿರುವುದು ಸೂಕ್ತವಾಗಿರುವುದರಿಂದ ಈ ಕುರಿತಾಗಿ ಇಲಾಖೆಯ ಚಿಂತನೆ ಏನು; (ವಿವರ ನೀಡುವುದು)

(ಆ) ಪ್ರತಿ ವಿಷಯಕ್ಕೂ ಬೇರೆ ಬೇರೆ ವಿಶ್ವವಿದ್ಯಾಲಯಗಳನ್ನು ತೆರೆಯುವುದರಿಂದ, ಗ್ರಾಮೀಣ ಕೃಷಿ ಜೀವನವನ್ನು ಸಮಗ್ರವಾಗಿ ಆಯೋಜಿಸಿ ಮುನ್ನಡೆಸಲು ಸೂಕ್ತ ಕೈಗೊಳ್ಳುವಲ್ಲಿ ಹಾಗೂ ಅಗತ್ಯ ಸಂಶೋಧನೆ ನಡೆಸುವಲ್ಲಿ ಅಡ್ಡಿ–ಆತಂಕಗಳು ಮತ್ತು ಪುನರಾವರ್ತನೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಕುರಿತಾಗಿ ಸರ್ಕಾರ ಕ್ರಮ ಏನು?

## ಆಧುನಿಕ ಕೃಷಿ ಅಳವಡಿಕೆಯಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೯೬೬ (೧೭೭೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಆಧುನಿಕ ಕೃಷಿಯನ್ನು ಅಳವಡಿಸುವ ಅವಸರದಲ್ಲಿ ನೀರು, ರಸಗೊಬ್ಬರ, ಕೀಟನಾಶಕ ಹಾಗೂ ಕ್ರಿಮಿ ನಾಶಕಗಳ ಹೆಚ್ಚಿನ ಬಳಕೆ ಹಾಗೂ ದುರ್ಬಳಕೆಯಿಂದ ಆಗುತ್ತಿರುವ ದುಷ್ಪರಿಣಾಮಗಳ ಕುರಿತು ಸರ್ವೇಕ್ಷಣೆ ನಡೆಸಲಾಗಿದೆಯೇ; (ವಿವರ ನೀಡುವುದು)

(ಆ) ಮಣ್ಣು, ಪರಿಸರ ಹಾಗೂ ನಾವು ದಿನನಿತ್ಯ ಬಳಸುವ ಆಹಾರ ಸಾಮಗ್ರಿಗಳ ಮೇಲೆ ಈ ದುರ್ಬಳಕೆಯಿಂದ ಉಂಟಾಗುವ ಪರಿಣಾಮಗಳೇನು;

(ಇ) ಕೃಷಿ ಉತ್ಪನ್ನವನ್ನು ಕುಂಠಿತಗೊಳಿಸದೆ ಜನತೆಗೆ ಅಗತ್ಯವಿರುವ ಕೃಷಿ ಉತ್ಪಾದನೆಯ ಕಡೆಗೆ ಗಮನ ನೀಡುತ್ತಾ ಗುಣಮಟ್ಟದ ಆಹಾರ ಧಾನ್ಯಗಳನ್ನು ಬೆಳೆಯಲು ಇಲಾಖೆ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ ಪುರಸಭೆ ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೯೬೭ (೧೭೭೩) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಹಾಗೂ ಮಹಾನಗರ ಪಾಲಿಕೆಗಳು ಎಷ್ಟು; ಈ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆ ಅಳವಡಿಸಲಾಗಿದೆಯೇ; (ವಿವರ ನೀಡುವುದು)

(ಆ) ಒಳಚರಂಡಿ ವ್ಯವಸ್ಥೆ ಲಭ್ಯವಿಲ್ಲದ ಸ್ಥಳೀಯ ಸಂಸ್ಥೆಗಳಿಗೆ ಯಾವ ಕಾಲಮಿತಿಯೊಳಗೆ ಈ ವ್ಯವಸ್ಥೆಯನ್ನು ಅಳವಡಿಸಲು ಸರ್ಕಾರ ಚಿಂತನೆಯಲ್ಲಿದೆ;

(ಇ) ಒಳಚರಂಡಿ ವ್ಯವಸ್ಥೆಯುನ್ನು ಅಳವಡಿಸಲು ಇರುವ ತೊಂದರೆಗಳೇನು?

## ರಾಜ್ಯದಲ್ಲಿ ವಿದ್ಯುತ್ ಜಾಗದಿಂದ ಪ್ರಸರಣ ಮತ್ತು ಹಂಚಿಕೆ ಮಾಡುವಾಗ ಆಗುತ್ತಿರುವ ನಷ್ಟದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೯೬೮ (೧೭೭೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸ್ಥಳದಿಂದ ಪ್ರಸರಣ ಮತ್ತು ಹಂಚಿಕೆ ಮಾಡುವಾಗ ಆಗುತ್ತಿರುವ ನಷ್ಟ ಎಷ್ಟು; (ವಿವರ ನೀಡುವುದು)

(ಆ) ಈ ನಷ್ಟ ರಾಷ್ಟ್ರದ ಮತ್ತು ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದಾಗ ಇರುವ ಪ್ರಮಾಣವೆಷ್ಟು; (ವಿವರ ನೀಡುವುದು)

(ಇ) ಒಟ್ಟು ನಷ್ಟದ ಎಷ್ಟು ಭಾಗ ಕಳ್ಳತನದಿಂದ ಆಗುತ್ತದೆ; ಇದನ್ನು ನಿಯಂತ್ರಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

(ಈ) ಕಳಪೆ ಗುಣಮಟ್ಟದ ವಿದ್ಯುತ್ ತಂತಿ, ಟ್ರಾನ್ಸ್‌ಫಾರ್ಮರ್ ಹಾಗೂ ಇತರ ಸಲಕರಣೆಗಳಿಂದಾಗಿ ಆಗುತ್ತಿರುವ ನಷ್ಟವೆಷ್ಟು; (ವಿವರ ನೀಡುವುದು) ಹಾಗೂ ಈ ಕುರಿತಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಕೃಷಿ ಮಾರುಕಟ್ಟೆಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೯೬೯ (೧೮೭೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕೃಷಿ ಮಾರುಕಟ್ಟೆಗಳಿವೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಯಾವ ಯಾವ ಸರಕುಗಳು ಕೃಷಿ ಮಾರುಕಟ್ಟೆ ವ್ಯಾಪ್ತಿಗೆ ಒಳಪಡುತ್ತವೆ;

(ಇ) ರೈತರಿಂದ ಯಾವ ಯಾವ ಸರಕುಗಳಿಗೆ ಶೇಕಡವಾರು ನಿಗದಿಪಡಿಸಲಾಗಿರುವ ಶುಲ್ಕ ಎಷ್ಟು; ಸರಕುವಾರು ವಿವರ ನೀಡುವುದು; ಅಥವಾ ರೈತರಿಂದ ಯಾವುದೇ ಶುಲ್ಕ ಪಡೆಯಬಾರದೇ; (ವಿವರವಾಗಿ ತಿಳಿಸುವುದು)

(ಈ) ರೈತ ಮಂಡಿ ಅಂದರೇನು; ಇದಕ್ಕೆ ಸರ್ಕಾರದಿಂದ ಸಿಗಬಹುದಾದ ಸವಲತ್ತುಗಳೇನು; ಈ ಯೋಜನೆಯ ಸಂಪೂರ್ಣ ವಿವರ ನೀಡುವುದು; ಇದನ್ನು ಸ್ಥಾಪನೆ ಮಾಡಲಾಗುವುದೇ;

(ಉ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ವಿವರವಾಗಿ ತಿಳಿಸುವುದು;

(ಊ) ಇಲಾಖೆಯು ಐ.ಇ.ಸಿ. ಕಾರ್ಯಕ್ರಮದಡಿ ಕಳೆದ ೩ ವರ್ಷಗಳಿಂದ ವೆಚ್ಚ ಮಾಡಿರುವ ಹಣವೆಷ್ಟು? (ವಿವರವಾಗಿ ಕಾರ್ಯಕ್ರಮವಾರು, ವರ್ಷಾವಾರು ಮಾಹಿತಿ ನೀಡುವುದು)

## ರೇಷ್ಮೆ ಉತ್ಪಾದನೆ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೯೭೦ (೧೮೭೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಈ ಸಂಬಂಧ ಸರ್ಕಾರವು ರೇಷ್ಮೆ ಉತ್ಪಾದನೆ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು; (ಸಂಪೂರ್ಣವಾದ ವಿವರವಾದ ಮಾಹಿತಿ ಕೊಡುವುದು)

(ಇ) ರೇಷ್ಮೆ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು; (ವಿವರವಾದ ಮಾಹಿತಿ ನೀಡುವುದು)

(ಈ) ರೇಷ್ಮೆ ಇಲಾಖೆಯಲ್ಲಿ ಅಡಿಯಲ್ಲಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗ, ಅಕಾಡೆಮಿ, ಅಂಗ ಸಂಸ್ಥೆಗಳು, ಯಾವುವು, ಯಾವ ಉದ್ದೇಶಕ್ಕಾಗಿ ಯಾವಾಗ ಸ್ಥಾಪನೆ ಮಾಡಲಾಯಿತು; (ವಿವರವಾಗಿ ಕೇಂದ್ರ ಕಛೇರಿ ವಿಳಾಸ ಒಳಗೊಂಡಂತೆ ಮಾಹಿತಿ ನೀಡುವುದು)

(ಉ) ರೇಷ್ಮೆ ಇಲಾಖೆಯಲ್ಲಿ ಹಾಲಿ ಬಾಕಿ ಇರುವ ಅನುಕಂಪ ಆಧಾರದ ಮೇಲೆ ಕೆಲಸ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಯಾವ ದಿನಾಂಕದಿಂದ ಬಾಕಿ ಇವೆ; ಇವರಿಗೆ ಕೆಲಸ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

(ಊ) ಯಾವ ಕಾಲಮಿತಿಯೊಳಗೆ ಸರ್ಕಾರವು ಇವರಿಗೆ ಉದ್ಯೋಗ ನೀಡಿ ಮೃತರ ಕುಟುಂಬಕ್ಕೆ ನ್ಯಾಯ ಒದಗಿಸಲಾಗುವುದು?

## ರಸ್ತೆ ನಿರ್ಮಾಣ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೯೭೧ (೧೮೭೭) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಗುಬ್ಬಿ ನಗರದಿಂದ ಸಿ.ಎಸ್. ಪುರದವರೆಗೆ ನಿರ್ಮಾಣವಾಗುತ್ತಿರುವ ರಸ್ತೆಯ ಯೋಜನಾ ವೆಚ್ಚವೆಷ್ಟು; ಇಲ್ಲಿಯವರೆಗೆ ಪಾವತಿಸಿರುವ ಹಣವೆಷ್ಟು;

(ಆ) ಈ ರಸ್ತೆಯ ಮಧ್ಯಭಾಗದಲ್ಲಿ ಮರಗಳಿದ್ದರೂ ಕೂಡಾ ಅವುಗಳನ್ನು ತೆರವುಗೊಳಿಸದೆ ರಸ್ತೆ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೆ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಈ) ಮರಗಳನ್ನು ತೆರವುಗೊಳಿಸದೆ ರಸ್ತೆ ನಿರ್ಮಾಣ ಮಾಡಿ, ಡಾಂಬರು ಹಾಕಿದರೆ ಅದು ರಾಜ್ಯ ಹೆದ್ದಾರಿ ಎನ್ನಿಸಿಕೊಳ್ಳುವುದೇ;

(ಉ) ಮರಗಳನ್ನು ತೆರವುಗೊಳಿಸುವ ಸಂಬಂಧ ಯಾವುದಾದರೂ ನ್ಯಾಯಾಲಯದ ಆದೇಶವಿದೆಯೇ? (ವಿವರವಾದ ಮಾಹಿತಿ ನೀಡುವುದು)

## ಸಾವಯವ ಕೃಷಿಗೆ ಉತ್ತೇಜನ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೨ (೧೮೬೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಸಾಯನಿಕ ಬಳಕೆ ಮಾಡಿ ಕೃಷಿ ಮಾಡುವುದಕ್ಕಿಂತ ಸಾವಯವ ಕೃಷಿ ಉತ್ತಮವಲ್ಲವೇ;

(ಆ) ರಾಸಾಯನಿಕ ಕೃಷಿಯ ದುಷ್ಪರಿಣಾಮಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಹಾಗೂ ಸಾವಯವ ಕೃಷಿ ಬಗ್ಗೆ ಒಲವು ಮೂಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

(ಇ) ಈ ಬಗ್ಗೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳುತ್ತದೆ?

## "ನಿರಂತರ ಜ್ಯೋತಿ" ಯೋಜನೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೩ (೧೮೬೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) "ನಿರಂತರ ಜ್ಯೋತಿ" ಯೋಜನೆ ಪ್ರಾರಂಭಗೊಂಡಿದ್ದು ಯಾವಾಗ;

(ಆ) ಈ ಯೋಜನೆಯಡಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇನ್ನೂ ಎಷ್ಟು ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಬೇಕಾಗಿದೆ; ಎಷ್ಟು ದಿವಸಗಳಲ್ಲಿ ಸರಬರಾಜು ಮಾಡಲಾಗುವುದು?

## ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೪ (೧೮೬೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳಾವುವು;

(ಆ) ಅವುಗಳಲ್ಲಿ ನಷ್ಟದಲ್ಲಿರುವ ಉದ್ದಿಮೆಗಳಾವುವು; ಈ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಇ) ಸಾರ್ವಜನಿಕ ಉದ್ದಿಮೆಗಳಲ್ಲಿ ನಷ್ಟವನ್ನು ಹೊಂದುತ್ತಿರುವ ಯಾವ ಯಾವ ಉದ್ದಿಮೆಗಳನ್ನು ಮುಚ್ಚಲು ತಜ್ಞರ ಸಮಿತಿ ಶಿಫಾರಸ್ಸು ಮಾಡಿತ್ತು; ಆ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಪಶು ಭಾಗ್ಯ ಯೋಜನೆ ಕುರಿತು

**ಡಾ|| ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೧೯೭೫ (೧೮೫೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆ.ಎಂ.ಎಫ್/ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದ, “ಪಶುಭಾಗ್ಯ ಯೋಜನೆ” ಯನ್ನು ಹಿಂಪಡೆದು, ಪಶುಸಂಗೋಪನಾ ಇಲಾಖೆಯೇ ನೇರವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆಯೇ; ಹಾಗಿದ್ದಲ್ಲಿ, ಹಿಂಪಡೆಯಲು ಕಾರಣಗಳೇನು;

(ಆ) ಪಶುಗಳ ಆಯ್ಕೆ, ಪಶುಗಳ ಸಾಕಾಣಿಕೆ, ಮೇವು ಉತ್ಪಾದನೆ, ಹಾಲು ಉತ್ಪಾದನೆ ಇಂತಹ ತಿಳುವಳಿಕೆಗಳಿಲ್ಲದೆ, ಯೋಜನೆಯಡಿ ಪಶುಗಳನ್ನು ಪಡೆದು ರೈತರು ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕೆ.ಎಂ.ಎಫ್/ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟಗಳಲ್ಲಿ ನುರಿತ ತಜ್ಞರುಗಳಿದ್ದು, ಯೋಜನೆಯ ರೂಪುರೇಷೆಗಳು, ಯಶಸ್ಸುಗೊಳಿಸುವ ಬಗ್ಗೆ ತಿಳುವಳಿಕೆಗಳನ್ನು ರೈತರುಗಳಿಗೆ ನೀಡಲು, ಜೊತೆಗೆ ಅಗತ್ಯ ನೆರವುಗಳನ್ನು ನೀಡಲು ಕೆ.ಎಂ.ಎಫ್/ಜಿಲ್ಲಾ ಉತ್ಪಾದಕರ ಸಹಕಾರ ಒಕ್ಕೂಟಗಳು ಸೂಕ್ತವಲ್ಲವೇ;

(ಈ) ಪಶುಭಾಗ್ಯ ಯೋಜನೆಯ ಅನುಷ್ಠಾನವನ್ನು ಇಲಾಖೆ ಬದಲಿಗೆ ಕೆ.ಎಂ.ಎಫ್. ಮೂಲಕ ಪುನಃ ಅನುಷ್ಠಾನ ಮಾಡಲು ಸರ್ಕಾರ ಚಿಂತಿಸುವುದೇ?

## ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ ಕೇಂದ್ರದ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೬ (೧೮೮೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ಥಿಗೊಳಿಸುವ ಕೇಂದ್ರವನ್ನು ಮೊಳಕಾಲ್ಮೂರು ಉಪ ವಿಭಾಗ ಮತ್ತು ಚಳ್ಳಕೆರೆ ತಾಲ್ಲೂಕು ಕೇಂದ್ರದಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಆ) ಇದ್ದಲ್ಲಿ, ಪ್ರಾರಂಭಿಸಲಾಗುವುದು ಯಾವಾಗ?

## ಬೆಳೆ ವಿಮೆ ವಿಸ್ತರಿಸುವ ಕುರಿತು ಮತ್ತು ಮಣ್ಣು ಆರೋಗ್ಯ ಕಾರ್ಡ್ ಶೀಘ್ರ ವಿತರಣೆ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೭ (೧೭೭೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದ ಯೋಜನೆಯಾದ ರೈತರ "ಬೆಳೆ ವಿಮೆ" ಯೋಜನೆಗಾಗಿ ರಾಜ್ಯದ ಒಟ್ಟು ಎಷ್ಟು ರೈತರು, ಒಟ್ಟು ಎಷ್ಟು ಮೊತ್ತದ ಪ್ರಿಮೀಯಂ ಪಾವತಿ ಮಾಡಿರುತ್ತಾರೆ; (ಜಿಲ್ಲಾವಾರು ವಿವರ ನೀಡುವುದು)

(ಆ) "ಬೆಳೆ ವಿಮೆ" ಯೋಜನೆಯಡಿ ರೈತರು ಪಡೆದ ವಿಮಾ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಬೆಳೆ ನಷ್ಟದ ಸಂದರ್ಭದಲ್ಲಿ ರೈತರಿಗೆ ನೆರವಾಗುವ, ರೈತರ ಆತ್ಮಹತ್ಯೆ ತಡೆಯುವ ನಿಟ್ಟಿನಲ್ಲಿ ಪ್ರಮುಖವೆನಿಸುವ "ಬೆಳೆ ವಿಮೆ" ಯೋಜನೆಯನ್ನು ಪ್ರತಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ರಾಜ್ಯದ ರೈತರಿಗೆ ಮಣ್ಣು ಆರೋಗ್ಯ ಕಾರ್ಡ್ ಚೀಟಿ ಅಗತ್ಯ ಸಂಖ್ಯೆಯಲ್ಲಿ ವಿತರಿಸಲು ಸರ್ಕಾರ ವಿಫಲವಾಗಿರುವುದು ನಿಜವೇ;

(ಉ) ಇಲ್ಲಿಯವರೆಗೆ ಒಟ್ಟು ಎಷ್ಟು ರೈತರಿಗೆ ಮಣ್ಣು ಆರೋಗ್ಯ ಕಾರ್ಡ್ ವಿತರಿಸಲಾಗಿದೆ; ಎಷ್ಟು ರೈತರಿಗೆ ವಿತರಿಸಲು ಬಾಕಿಯಿದೆ; ಬಾಕಿಯಿರಲು ಕಾರಣಗಳೇನು;

(ಊ) ರೈತರಿಗೆ ಕೂಡಲೇ “ಮಣ್ಣು ಆರೋಗ್ಯ ಕಾರ್ಡ್” ವಿತರಿಸಲು ಹಾಗೂ ಹೆಚ್ಚು ರೈತರನ್ನು “ಬೆಳೆ ವಿಮೆ” ಯೋಜನೆಯಡಿ ತರಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ನೀಡುವುದು)

## ಕೃಷಿ ಹೊಂಡದಲ್ಲಿ ಬಿದ್ದು ಮೃತಪಟ್ಟ ರೈತರಿಗೆ ಪರಿಹಾರ ನೀಡುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ), ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೮ (೧೭೭೯+೧೭೮೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೪ ವರ್ಷಗಳಲ್ಲಿ ಕೃಷಿ ಹೊಂಡದಲ್ಲಿ ಬಿದ್ದು ಮೃತಪಟ್ಟ ರೈತರ ಸಂಖ್ಯೆ ಎಷ್ಟು; ಸಂತ್ರಸ್ಥ ಕುಟುಂಬಕ್ಕೆ ಯಾವ ರೀತಿ ಪರಿಹಾರ ನೀಡಲಾಗಿದೆ; ಒಟ್ಟು ಎಷ್ಟು ಪ್ರಕರಣದಲ್ಲಿ ಪರಿಹಾರ ನೀಡಲಾಗಿದೆ;

(ಆ) ೨೦೧೬–೧೭ನೇ ಸಾಲಿನಲ್ಲಿ ನಿರ್ಮಾಣ ಮಾಡಲಾದ ಕೃಷಿ ಹೊಂಡ ಮತ್ತು ಕೃಷಿ ಹೊಂಡ ಮುಚ್ಚಳಿಕೆಗಳ ಸಂಖ್ಯೆ ಎಷ್ಟು; ಘಟಕ ವೆಚ್ಚ ಮತ್ತು ಸಬ್ಸಿಡಿ ಮೊತ್ತ ಎಷ್ಟು; ಒಟ್ಟು ಖರ್ಚು ಮಾಡಲಾದ ಅನುದಾನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ನಿರ್ಮಿಸಿರುವ

ಕೃಷಿ ಹೊಂಡಗಳ ಸಂಖ್ಯೆ ಎಷ್ಟು; ಮುಂದಿನ ಸಾಲಿನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಕೃಷಿ ಹೊಂಡಗಳ ಸಂಖ್ಯೆ ಎಷ್ಟು; ಇದಕ್ಕೆ ತಗಲುವ ವೆಚ್ಚ ಎಷ್ಟು ; (ಜಿಲ್ಲಾವಾರು ಹಂಚಿಕೆಯ ವಿವರ ನೀಡುವುದು)

(ಈ) ಕೃಷಿ ಹೊಂಡ ಮತ್ತು ಮುಚ್ಚಳಿಕೆ ನಿರ್ಮಾಣದ ಸರ್ಕಾರದ ಗುರಿ ತಲುಪುವಲ್ಲಿ ವಿಫಲವಾಗಿರುವುದು ನಿಜವೇ ;

(ಉ) ಕೃಷಿ ಹೊಂಡ ನಿರ್ಮಾಣದ ಗುರಿಯನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಊ) ೨೦೧೭–೧೮ನೇ ಸಾಲಿನಲ್ಲಿ ಇನ್ನೂ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

## ರಾಜ್ಯದ ಎಸ್ಕಾಂಗಳ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೯ (೧೮೧೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಎಸ್ಕಾಂಗಳಿವೆ; ಅವು ಯಾವುವು; ಎಸ್ಕಾಂವಾರು ಮಂಜೂರಾದ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಕಳೆದ ೫ ವರ್ಷಗಳ ಎಸ್ಕಾಂಗಳ ವಾರ್ಷಿಕ ಲಾಭ–ನಷ್ಟದ ಪ್ರಮಾಣ ಎಷ್ಟು; (ವರ್ಷಾವಾರು, ಎಸ್ಕಾಂವಾರು ವಿವರ ನೀಡುವುದು)

(ಇ) ವಿವಿಧ ಎಸ್ಕಾಂ ವಲಯಗಳಲ್ಲಿ ಬಾಕಿಯಿರುವ ವಿದ್ಯುತ್ ಬಿಲ್ಲಿನ ಮೊತ್ತವೆಷ್ಟು; ವಸೂಲಾಗುವ ಮೊತ್ತದ ಸರಾಸರಿ ಪ್ರಮಾಣ ಎಷ್ಟು; (ವರ್ಷಾವಾರು, ಎಸ್ಕಾಂವಾರು ವಿವರ ನೀಡುವುದು)

(ಈ) ಬಾಕಿ ವಿದ್ಯುತ್ ವಸೂಲಿ, ವಿದ್ಯುತ್ ಕಳ್ಳತನ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ವಿದ್ಯುತ್ ಬಿಲ್ ಪಾವತಿಯನ್ನು ನಗದುರಹಿತವನ್ನಾಗಿ ಮಾಡಲು, ಆನ್‌ಲೈನ್ ಪಾವತಿ ಮತ್ತು ಆ್ಯಪ್ ಆಧಾರಿತ ಪಾವತಿಗೆ ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಿದೆ ?

## ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ನೀಡಲು ನಿರಾಕ್ಷೇಪಣಾ ಪತ್ರದಿಂದ ವಿನಾಯಿತಿ ನೀಡುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮೦ (೧೭೭೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ವಿದ್ಯುತ್ ರಹಿತ ಕುಟುಂಬಗಳ ಸಂಖ್ಯೆ ಎಷ್ಟು; ಅಧಿಕೃತ ಮತ್ತು ಅನಧಿಕೃತ ಕಟ್ಟಡವಿರುವ ಪ್ರಕರಣಗಳ ಸಂಖ್ಯೆಯೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಸತಿ ವಾಣಿಜ್ಯ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸ್ಥಳೀಯ ಸಂಸ್ಥೆಗಳ ನಿರಾಕ್ಷೇಪಣಾ ಪತ್ರ ಅಗತ್ಯವೇ; ಯಾವ ಕಾಯಿದೆ/ಮಾರ್ಗಸೂಚಿ ಅನ್ವಯ ಅಗತ್ಯಪಡಿಸಲಾಗಿದೆ ;(ಪ್ರತಿ ಒದಗಿಸುವುದು)

(ಇ) ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ರಹಿತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಸರ್ಕಾರದ ಯೋಜನೆಗಳೇನು; ಕೇಂದ್ರ ಮತ್ತು ರಾಜ್ಯದ ಅನುದಾನದ ಪಾಲೇಷ್ಟು ;

(ಈ) ಉಚ್ಚನ್ಯಾಯಾಲಯವು, WP NO. 2708 OF 2011 [LB-RES] SATYANARAYANA VARNA VS PANCHAYATH DEVELOPMENT OFFICER, KOTESHWARA, KUNDPURA TALUK ಪ್ರಕರಣದಲ್ಲಿ,

"Power connection is an essential requirement in the present day world and it is as basic a requirement as air and water. In fact, quality of life is dependant on the availability or otherwise of power connection" ಎಂದು ಹೇಳಿರುವುದು ಸರ್ಕಾರ ಗಮನಿಸಿದೆಯೇ;

(ಉ) ೯೪ಸಿ ಯೋಜನೆಯಡಿ ಅರ್ಜಿಸಲ್ಲಿಸಿ ಹಕ್ಕು ಪತ್ರಕ್ಕಾಗಿ ಕಾಯುತ್ತಿರುವ ಬಡವರೂ ಸೇರಿದಂತೆ, ಗ್ರಾಮೀಣ ಪ್ರದೇಶದಲ್ಲಿ, ಸರ್ಕಾರಿ ಭೂಮಿಯಲ್ಲಿ ಮತ್ತು ಅನಧಿಕೃತ ಕಟ್ಟಡದಲ್ಲಿ ಮನೆ ಕಟ್ಟಿಕೊಂಡಿರುವ ಮನೆಯ ಮೂಲ ಸೌಕರ್ಯ ಒದಗಿಸುವ ಜವಾಬ್ದಾರಿಯಿಂದ ಮತ್ತು ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳ ನಿರಾಕ್ಷೇಪಣಾ ಪತ್ರವಿಲ್ಲದೇ, ವಿದ್ಯುತ್ ಸಂಪರ್ಕ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ;

(ಊ) ರಾಜ್ಯದ ಗ್ರಾಮೀಣ ವ್ಯಾಪ್ತಿಯಲ್ಲಿನ ಪ್ರತಿಯೊಂದು ವಿದ್ಯುತ್ ರಹಿತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ನೀಡುವ ಗುರಿಯನ್ನು ಯಾವಾಗ ಸಾಧಿಸಲಿದೆ; ಇದಕ್ಕಾಗಿ ಸರ್ಕಾರದ ಕ್ರಿಯಾಯೋಜನೆಗಳೇನು?

## ರಾಜ್ಯದ ವಿದ್ಯುತ್ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮೧ (೧೭೭೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಿದ್ಯುತ್ ಕಂಪನಿಗಳು ಯಾವುವು; ಆ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವಿಧ ದರ್ಜೆಯ ಅಧಿಕಾರಿ/ತಾಂತ್ರಿಕ ಹುದ್ದೆ/ಇತರೆ ದರ್ಜೆಯ ನೌಕರರ ಹುದ್ದೆ ಸೇರಿದಂತೆ ಕಂಪನಿವಾರು, ಜಿಲ್ಲಾವಾರು ಮಾಹಿತಿ ನೀಡುವುದು) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ;

(ಆ) ಬೆಸ್ಕಾಂಗೆ ಸೇರಿದಂತೆ ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ತುಮಕೂರು ಜಿಲ್ಲೆಗೆ ಸೇರಿದಂತೆ ತಾಲ್ಲೂಕುವಾರು, ವಿಭಾಗವಾರು, ಉಪವಿಭಾಗವಾರು ವಿವರ ನೀಡುವುದು)

(ಇ) ಈ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು; (ನಿಖರವಾಗಿ ತಿಳಿಸುವುದು)

(ಈ) ತುಮಕೂರು ಜಿಲ್ಲೆಯಾದ್ಯಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಲೈನ್‌ಮನ್‌ಗಳ ಕೊರತೆ ಇದ್ದು, ಇದರಿಂದ ಸಾರ್ವಜನಿಕರಿಗೆ, ರೈತರಿಗೆ ತುಂಬಾ ತೊಂದರೆ ಆಗುತ್ತಿರುವುದರಿಂದ, ಈ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡಲಾಗುವುದು?

## ರಾಜ್ಯದಲ್ಲಿ ಅಳವಡಿಸಿರುವ ಕೃಷಿ ಯೋಜನೆಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮೨ (೧೭೪೯) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಳೆ ಆಶ್ರಿತ ರೈತರ ಅಭಿವೃದ್ಧಿಗೆ ಕೃಷಿ ಭಾಗ್ಯ ಯೋಜನೆಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ; ಈ ಯೋಜನೆಯ ಉದ್ದೇಶಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ೨ ವರ್ಷದಲ್ಲಿ ಈ ಯೋಜನೆಗೆ ಒದಗಿಸಿರುವ ಅನುದಾನವೆಷ್ಟು; ಇದರಿಂದ ರೈತರಿಗೆ ಆಗಿರುವ ಪ್ರಯೋಜನಗಳ ಬಗ್ಗೆ ವಿವರ ನೀಡುವುದು;

(ಇ) ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ಯಾಕೇಜ್ ಘಟಕಗಳನ್ನು ಯಾವ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆ ಕಂಪನಿಗಳಿಗೆ ನೀಡಿರುವ ಹಣವೆಷ್ಟು; ಆ ಕಂಪನಿಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ೨೦೧೭ರ ಮಾರ್ಚ್ ಅಂತ್ಯಕ್ಕೆ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿದೆ; ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು;

(ಉ) ಇದುವರೆವಿಗೂ ಈ ಯೋಜನೆಗೆ ಒದಗಿಸಲಾಗಿರುವ ಅನುದಾನದ ಪೈಕಿ ಖರ್ಚಾಗಿರುವ ಹಣವೆಷ್ಟು; ಯೋಜನಾವಾರು ಮಾಹಿತಿ ನೀಡುವುದು ;

(ಊ) ರೈತರಿಗೆ ನೇರವಾಗಿ ಇದರ ಪ್ರಯೋಜನ ದೊರಕದೆ ಮಧ್ಯವರ್ತಿಗಳು ಹಾಗು ಕಂಪನಿಗಳಿಂದ ಹಣ ದುರುಪಯೋಗಪಡಿಸಿ

ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಸುಧಾರಣಾ ಕ್ರಮಗಳಾವುವು ; (ವಿವರ ನೀಡುವುದು)

(ಋ) ಈ ಯೋಜನೆಯ ಅಡಿಯಲ್ಲಿ ತುಮಕೂರು ಜಿಲ್ಲೆಗೆ ಒದಗಿಸಿರುವ ಹಣ ಮತ್ತು ಖರ್ಚಾಗಿರುವ ಹಣವೆಷ್ಟು; ಈ ಯೋಜನೆಗಳಿಂದ ಆಗಿರುವ ಪ್ರಗತಿ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ನೆಲಮಂಗಲ–ತುಮಕೂರು ರಸ್ತೆಯನ್ನು ೬ ಪಥದ ರಸ್ತೆಯನ್ನಾಗಿ ರೂಪಿಸುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮೩ (೧೮೦೦) ಮಾನ್ಯ ಲೋಕೋಪಯೊಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ನೇ ಸಾಲಿನಲ್ಲಿ ರಾಜ್ಯದ ಎಷ್ಟು, ರಾಜ್ಯ ಹೆದ್ದಾರಿ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ; ಹಾಗಿದ್ದಲ್ಲಿ, ಆ ರಸ್ತೆಗಳು ಯಾವುವು ; (ವಿವರ ನೀಡುವುದು)

(ಆ) ಮೇಲ್ದರ್ಜೆಗೇರಿಸಿರುವ ರಸ್ತೆಗಳಿಗೆ ಒದಗಿಸಿರುವ ಅನುದಾನವೆಷ್ಟು; ಹಾಗೂ ಈ ರಸ್ತೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ; (ವಿವರ ನೀಡುವುದು)

(ಇ) ನೆಲಮಂಗಲ–ತುಮಕೂರು ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ೬ ಪಥದ ರಸ್ತೆಯನ್ನಾಗಿ ನಿರ್ಮಾಣ ಮಾಡಲಾಗುತ್ತಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಪ್ರಗತಿಯಲ್ಲಿರುವ ಕಾರ್ಯಗಳ ಬಗ್ಗೆ ವಿವರ ನೀಡುವುದು ;

(ಈ) ತುಮಕೂರು–ನೆಲಮಂಗಲ ಮಾರ್ಗವಾಗಿ ಉತ್ತರ ಕರ್ನಾಟಕ ಜಿಲ್ಲೆಗೆ ಸೇರಿದ ಪೂನಾ–ಮುಂಬಯಿ ಕಡೆಯಿಂದ ವಾಹನಗಳು ಈ ಮಾರ್ಗವಾಗಿ ಸಂಚರಿಸುತ್ತಿರುವ ಕಾರಣ ಸಂಚಾರದ ದಟ್ಟಣೆ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಉ) ಬಂದಿದ್ದಲ್ಲಿ, ೬ ಪಥದ ರಸ್ತೆ ಜೊತೆಗೆ ನೆಲಮಂಗಲದಿಂದ ತುಮಕೂರಿನವರೆಗೆ ಇಕ್ಕಡೆಯಲ್ಲಿ ೨ ಪಥದ ರಸ್ತೆಯನ್ನು ನಿರ್ಮಿಸಲು ಕ್ರಮ ವಹಿಸಲಾಗುವುದೇ ?

## ವಿದ್ಯುತ್ ಪರಿವರ್ತಕಗಳನ್ನು ವಿತರಣೆ ಮಾಡುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೮೪ (೧೮೧೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸಾರ್ವಜನಿಕರು/ರೈತರು ವಿದ್ಯುತ್ ಪರಿವರ್ತಕಗಳನ್ನು ಪ್ರತ್ಯೇಕವಾಗಿ ಒದಗಿಸಿಕೊಡುವಂತೆ ಇಂಧನ ಇಲಾಖೆಗೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರೈತರು/ಸಾರ್ವಜನಿಕರು ಈ ಅರ್ಜಿಗಳನ್ನು ಸಲ್ಲಿಸಿ ಎಷ್ಟು ವರ್ಷಗಳು ಕಳೆದಿವೆ; ಈಗ ಎಷ್ಟು ವಿದ್ಯುತ್ ಪರಿವರ್ತಕಗಳನ್ನು ವಿತರಣೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ತುಮಕೂರು ಜಿಲ್ಲೆಯಾದ್ಯಂತ ಪರಿವರ್ತಕಗಳನ್ನು ಒದಗಿಸಿಕೊಡಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ತುಮಕೂರು ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು; ಈ ಅರ್ಜಿಗಳನ್ನು ಎಷ್ಟು ವರ್ಷಗಳ ಹಿಂದೆ ಸಲ್ಲಿಸಲಾಗಿದೆ; (ವಿವರ ನೀಡುವುದು)

(ಈ) ಕಳೆದ ಒಂದು ವರ್ಷದ ಹಿಂದೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ವಿದ್ಯುತ್ ಪರಿವರ್ತಕಗಳ ಬ್ಯಾಂಕ್ ಸ್ಥಾಪನೆ ಮಾಡಲಾಗುವುದೆಂದು ಘೋಷಣೆ ಮಾಡಲಾಗಿತ್ತೆ ;

(ಉ) ಹಾಗಿದ್ದಲ್ಲಿ, ಇಲ್ಲಿಯ ತನಕ ಎಷ್ಟು ವಿದ್ಯುತ್ ಪರಿವರ್ತಕಗಳ ಬ್ಯಾಂಕ್‌ಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪನೆ ಮಾಡಲಾಗಿದೆ; ಹಾಗೂ ಆ ಬ್ಯಾಂಕ್‌ಗಳಲ್ಲಿ ಸ್ಟಾಕ್ ಇರುವ ಪರಿವರ್ತಕಗಳ ಸಂಖ್ಯೆ ಎಷ್ಟು;

(ಊ) ರೈತರುಗಳು ವಿದ್ಯುತ್ ಪರಿವರ್ತಕಗಳನ್ನು ಹೊರಗಡೆ ತೆಗೆದುಕೊಳ್ಳಲು ಅನುಮತಿ ನೀಡಲಾಗುವುದೆ?

## ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೮೫ (೧೮೬೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಪಟ್ಟಣ ಪಂಚಾಯತ್, ಪುರಸಭೆಗಳಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಸ್ಥಳೀಯ ಸಂಸ್ಥೆಗಳಲ್ಲಿ ಅಗತ್ಯ ಕೆಲಸ ಕಾರ್ಯ ನಿರ್ವಹಿಸಲು ಸಿಬ್ಬಂದಿಗಳಿಲ್ಲದೆ ಸಾರ್ವಜನಿಕರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಾದರೆ, ಬೆಳಗಾವಿ ಜಿಲ್ಲೆಯಲ್ಲಿರುವ ನಗರಾಭಿವೃದ್ಧಿ ಇಲಾಖೆಯಡಿ ಬರುವ ಒಟ್ಟು ಸ್ಥಳೀಯ ಸಂಸ್ಥೆಗಳೆಷ್ಟು; ಅವುಗಳಿಗೆ ಮಂಜೂರಾದ ವಿವಿಧ ವರ್ಗಾವಾರು ಹುದ್ದೆಗಳೆಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; (ವೃಂದವಾರು ವಿವರ ನೀಡುವುದು)

(ಇ) ಹಲವಾರು ವರ್ಷಗಳಿಂದ ಪೌರಾಡಳಿತ, ಸ್ಥಳೀಯ ಸಂಸ್ಥೆಗಳಲ್ಲಿ ಇಲಾಖಾ ಪದೋನ್ನತಿ ಪ್ರಕ್ರಿಯೆ ನಡೆಸದೆ ಇರುವುದು ನಿಜವೇ; ಹಾಗಿದ್ದಲ್ಲಿ, ಕಾಲಬದ್ಧ ಪದೋನ್ನತಿ ಸಮಯ ಮೀರಿರುವ ನೌಕರರಿಗೆ ಯಾವ ಕಾಲಮಿತಿಯಲ್ಲಿ ಪದೋನ್ನತಿ ನೀಡಲಾಗುವುದು; (ವಿವರ ನೀಡುವುದು)

(ಈ) ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು; ಅದಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ನಗರದ ನಾಲೆಯ ಮಧ್ಯಭಾಗದಲ್ಲಿ ಅವೈಜ್ಞಾನಿಕವಾಗಿ ವಾಣಿಜ್ಯ ಮಳಿಗೆ ನಿರ್ಮಿಸುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೮೬ (೧೮೬೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ನಗರದ ಮಧ್ಯೆ ಭಾಗದಲ್ಲಿ ಹರಿಯುತ್ತಿರುವ ಬೃಹತ್ ನಾಲೆಯ ನಡುವೆ ಪುರಸಭೆಯು ಅವೈಜ್ಞಾನಿಕವಾಗಿ ವಾಣಿಜ್ಯ ಮಳಿಗೆ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಇದರಿಂದ ತಡೆಯಲ್ಪಟ್ಟ ಹಿನ್ನೀರಿನಿಂದ ಉಂಟಾಗುವ ಪ್ರಾಕೃತಿಕ ತೊಂದರೆಗಳು ಹಾಗೂ ನೀರು ಕಲುಷಿತವಾಗುವ ಬಗ್ಗೆ ಸಾರ್ವಜನಿಕರು ಆತಂಕಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಅವೈಜ್ಞಾನಿಕ ವಾಣಿಜ್ಯ ಮಳಿಗೆಗಳನ್ನು ನಾಲಾ ಮಧ್ಯ ಭಾಗದಲ್ಲಿ ಕಟ್ಟುತ್ತಿರಲು ಸಕಾರಣಗಳೇನು; ಇದರಿಂದ ಮುಂದೆ ಉಂಟಾಗಬಹದಾದ ತೊಂದರೆಗಳ ಬಗ್ಗೆ ಸರ್ಕಾರ ಚಿಂತಿಸಿದೆಯೇ;

(ಈ) ಈ ವಾಣಿಜ್ಯ ಮಳಿಗೆಯಿಂದ ಉಂಟಾಗುವ ಘನ ತ್ಯಾಜ್ಯ ಅದರ ಸೂಕ್ತ ವಿಲೇವಾರಿ ಮತ್ತು ಸ್ವಚ್ಛತೆಯ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಭೀಕರ ಬರಗಾಲದಿಂದ ತತ್ತರಿಸಿರುವ ಬೆಳಗಾವಿ ರೈತರಿಗೆ ಬೆಳೆ ಪರಿಹಾರ ನೀಡದಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೮೭ (೧೮೭೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಭೀಕರ ಬರಗಾಲದಿಂದ ರೈತರು ಸಂಕಷ್ಟ ಎದುರಿಸುತ್ತಿದ್ದು, ನೂರಾರು ಹೆಕ್ಟೇರ್ ಪ್ರದೇಶದ ಬೆಳೆ ನಾಶವಾಗಿದ್ದು, ಬೆಳೆ ಪರಿಹಾರಕ್ಕಾಗಿ ರೈತರು ಕಳೆದ ಏಳೆಂಟು ತಿಂಗಳುಗಳಿಂದ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಳೆ ನಾಶದಿಂದ ಹೈರಾಣಾಗಿರುವ ರೈತರಿಗೆ ಯಾವ ಕಾಲಮಿತಿಯಲ್ಲಿ ಬೆಳೆ ಪರಿಹಾರ ನೀಡಲಾಗುವುದು; ಜಿಲ್ಲೆಯಲ್ಲಿ ಎಷ್ಟು ಮಂದಿ ಬೆಳೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ; ಈಗಾಗಲೇ ಎಷ್ಟು ಜನ ರೈತರಿಗೆ ಬೆಳೆ ಪರಿಹಾರ ವಿತರಿಸಲಾಗಿದೆ; ಬಾಕಿ ಎಷ್ಟಿದೆ; (ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲೆಯಲ್ಲಿ ಬರಗಾಲದಿಂದ ಎಷ್ಟು ಪ್ರಮಾಣದ ಬೆಳೆ ನಾಶವಾಗಿದೆ ಎಂದು ಅಂದಾಜಿಸಲಾಗಿದೆ; ಎಷ್ಟು ಕೋಟಿ ಬೆಳೆ ಪರಿಹಾರ ಕೊಡಲು ಸರ್ಕಾರ ನಿರ್ಧರಿಸಿದೆ; (ವಿವರ ನೀಡುವುದು)

(ಈ) ಈಗಾಗಲೇ ಎಷ್ಟು ಕೋಟಿ ಹಣ ಬೆಳೆ ನಾಶದ ಪರಿಹಾರಕ್ಕಾಗಿ ಬಿಡುಗಡೆಯಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸುವ ನೆರಳು ಪರದೆ (ಪಾಲಿಹೌಸ್) ನಿರ್ಮಾಣದಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ನಡೆದಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೮೮ (೧೮೬೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸುವ ನೆರಳು ಪರದೆ (ಪಾಲಿಹೌಸ್) ನಿರ್ಮಾಣದಲ್ಲಿ ರೈತರ ಹೆಸರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರದ ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ರೈತರ ಹೆಸರಲ್ಲಿ ಅಕ್ರಮ ನಡೆಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಇ) ಸದರಿ ಪಾಲಿಹೌಸ್ ನಿರ್ಮಿಸಲು ಇರುವ ಸರ್ಕಾರದ ಮಾರ್ಗಸೂಚಿಗಳೇನು; ಯಾವ ಯಾವ ವರ್ಗದ ರೈತರಿಗೆ ಇದರ ಪ್ರಯೋಜನ ಸಿಗಲಿದೆ; ಯಾರ್ಯಾರಿಗೆ ಎಷ್ಟೆಷ್ಟು ಪ್ರಮಾಣದ ಸಬ್ಸಿಡಿ ಸಿಗಲಿದೆ; ಇರಬೇಕಾದ ಅರ್ಹತೆಗಳೇನು; (ವಿವರ ನೀಡುವುದು)

(ಈ) ಸನ್ ೨೦೧೫–೧೬, ೨೦೧೬–೧೭ನೇ ಸಾಲಿಗೆ ರಾಜ್ಯದಲ್ಲಿ ಎಲ್ಲೆಲ್ಲಿ ಪಾಲಿಹೌಸ್ (ನೆರಳು ಪರದೆ) ನಿರ್ಮಿಸಲಾಗಿದೆ; ಇದಕ್ಕೆ ಬಿಡುಗಡೆಯಾದ ಅನುದಾನವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಬೆಳಗಾವಿ ಜಿಲ್ಲೆಯಲ್ಲಿಯೂ ಪಾಲಿಹೌಸ್ ನಿರ್ಮಿಸಲಾಗಿದೆಯೇ; ಇದಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) ನಿರ್ಮಿಸದಿದ್ದರೆ, ಕಾರಣವೇನು?

## ಬೆಳಗಾವಿ ಜಿಲ್ಲೆಯಲ್ಲಿ ಹಳೆಯ ವಿದ್ಯುತ್ ಕಂಬಗಳು ಅಪಾಯದಲ್ಲಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೮೯ (೧೮೬೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಹಲವು ಭಾಗಗಳಲ್ಲಿ ಪ್ರಾಕೃತಿಕ ಶಕ್ತಿಗಳಿಂದ ವಿದ್ಯುತ್ ಕಂಬಗಳು ಶಿಥಿಲಗೊಂಡು ಬೀಳುವ ಸ್ಥಿತಿ ತಲುಪಿ ಅಪಾಯದ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಾದರೆ, ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

(ಇ) ಜಿಲ್ಲೆಯ ಚಿಂಚಳಿ, ಎಂ.ಕೆ. ಹುಬ್ಬಳ್ಳಿಯ ನಗರಗಳಲ್ಲಿ ವಿದ್ಯುತ್ ಕಂಬಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವುಗಳ ಬದಲಾವಣೆ ಮತ್ತು ಬೀಳುವ ಸ್ಥಿತಿಯಲ್ಲಿರುವ ಕಂಬಗಳನ್ನು ಸರಿಪಡಿಸಲು ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ;

(ಈ) ವಿದ್ಯುತ್ ಕಂಬಗಳನ್ನು ಸರ್ಕಾರವು ಎಷ್ಟು ವರ್ಷಗಳಿಗೊಮ್ಮೆ ಬದಲಾಯಿಸುತ್ತದೆ; ಅದರ ನಿರ್ವಹಣೆ ಹೇಗೆ ನಡೆಯುತ್ತದೆ; ಅದಕ್ಕಾಗಿ ಸರ್ಕಾರ ಪ್ರತಿ ವರ್ಷ ಎಷ್ಟು ಹಣ ವ್ಯಯಿಸುತ್ತದೆ; ಇದಕ್ಕಾಗಿ ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ, ಜಿಲ್ಲೆಯಲ್ಲಿ ಎಷ್ಟು ಹಣ ಖರ್ಚಾಗಿರುತ್ತದೆ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಹಲವಾರು ಬಾರಿ ಸ್ಥಳೀಯ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದರೂ ಗಮನ ಹರಿಸದಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೯೯೦ (೧೮೩೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬೇಸಿಗೆ ಕಾಲದಲ್ಲಿ ವಿದ್ಯುತ್ ಅಭಾವ ಉಂಟಾಗದಂತೆ ನಿರ್ವಹಿಸಲು ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು;

(ಆ) ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಕಡಿತ ಮಾಡಲಾಗುತ್ತಿದೆ; ಈ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ;

(ಇ) ವಿದ್ಯುತ್ ಸಮಸ್ಯೆಯನ್ನು ನೀಗಿಸಲು ಪರ್ಯಾಯವಾಗಿ ಅವಿಷ್ಕರಿಸುವ ಸೋಲಾರ್ ಯೋಜನೆಯಿಂದ ರೈತರ ಮನೆ/ ಜಮೀನಿನಲ್ಲಿ ಸೋಲಾರ್ ಪ್ಲಾಂಟ್ ನಿರ್ಮಾಣ ಮಾಡಿ, ಅವರಿಂದ ವಿದ್ಯುತ್ ಖರೀದಿಸುವ ಯೋಜನೆ ರಾಜ್ಯ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಪ್ರಾರಂಭವಾಗಿವೆ? (ಜಿಲ್ಲಾವಾರು ಮಾಹಿತಿ ನೀಡುವುದು)

## ಹರಿದಾಸನಹಳ್ಳಿಗೆ ನೂತನ ಎಂ.ವೈ. ಸ್ಟೇಷನ್ ಮಾಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೯೯೧ (೧೮೩೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುರುವೇಕೆರೆ ತಾಲ್ಲೂಕು, ಹರಿದಾಸನಹಳ್ಳಿ ಗ್ರಾಮಕ್ಕೆ ನೂತನವಾಗಿ ಬೆಸ್ಕಾಂ ಎಂ.ವೈ. ಸ್ಟೇಷನ್ ಮಂಜೂರು ಮಾಡಲಾಗಿದೆಯೇ;

(ಆ) ಮಂಜೂರಾಗಿದ್ದಲ್ಲಿ, ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆಯೇ;

(ಇ) ಇದುವರೆಗೂ ಪ್ರಾರಂಭಿಸದೇ ಇದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; ಕೂಡಲೇ ಮಂಜೂರು ಮಾಡಿ ಕೆಲಸ ಆರಂಭಿಸಲಾಗುವುದೇ?

## ಜೆ.ಓ.ಸಿ. ವಿದ್ಯಾರ್ಥಿಗಳಿಗೆ ನೇಮಕಾತಿಯಲ್ಲಿ ೫ ವರ್ಷ ವಯೋಮಿತಿ ಸಡಿಲಿಕೆಯನ್ನು ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೯೯೨ (೧೮೩೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಶು ಸಂಗೋಪನಾ ಇಲಾಖೆಯಲ್ಲಿನ ಪಶು ವೈದ್ಯಕೀಯ ಸಹಾಯಕರ ಹುದ್ದೆಗಳ ೨೦೧೨ರ ನೇಮಕಾತಿಯಲ್ಲಿ ರಾಜ್ಯದ ಜೆ.ಓ.ಸಿ. ಡೈರಿ ಡಿಪ್ಲೋಮ (೧೦+೨) ಹೈನುಗಾರಿಕಾ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ೬೪೨ ಹುದ್ದೆಗಳ ನೇಮಕಾತಿಯಲ್ಲಿ ೧೨೩ ಹುದ್ದೆಗಳು ಅಂದರೆ ಶೇಕಡಾ ೧೦% ಹುದ್ದೆಗಳು ದೊರಕಿರುವುದು ಜೆ.ಓ.ಸಿ. ವಿದ್ಯಾರ್ಥಿಗಳಿಗೆ ನಿರುದ್ಯೋಗ ಸೃಷ್ಟಿಗೆ ಇಲಾಖೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ವಿಶೇಷ ವೃಂದ ನೇಮಕಾತಿ ರಚನೆ ಮಾಡಿ ೨೦೧೨ ರಿಂದ ೨೦೧೭ರವರೆಗೆ ಅಂದರೆ ಮುಂಬರುವ ನೇಮಕಾತಿಯಲ್ಲಿ ಕನಿಷ್ಠ ೫ ವರ್ಷಗಳ ವಯೋಮಿತಿ ಸಡಿಲಿಕೆಯನ್ನು ನೀಡಿ ಜೆ.ಓ.ಸಿ. ಹೈನುಗಾರಿಕಾ ಡಿಪ್ಲೋಮ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ನ್ಯಾಯ ದೊರಕಿಸಿ ಕೊಡುವುದೇ? (ಪೂರ್ಣ ಮಾಹಿತಿ ನೀಡುವುದು)

## ತುಮಕೂರು ಜಿಲ್ಲೆಯ ಬೆಳೆಗಾರರಿಗೆ ಪರಿಹಾರ ಕುರಿತು

**ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೯೯೩ (೧೮೩೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆಯಲ್ಲಿ ಬೆಳೆ ಹಾನಿಗೆ ಪರಿಹಾರ ನೀಡುವ ಉದ್ದೇಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಪರಿಹಾರ ನೀಡುವುದು ಯಾವಾಗ ;

(ಆ) ಬೆಳೆ ಹಾನಿಗೆ ಕಾರಣ ಹಾಗೂ ಪ್ರಮಾಣವನ್ನು ಗುರುತಿಸಲು ಇರುವ ಮಾನದಂಡಗಳಾವುವು ? (ವಿವರ ನೀಡುವುದು)

## ತುರುವೇಕೆರೆ ಪಟ್ಟಣ ಪಂಚಾಯಿತಿಗೆ ವಿಶೇಷ ಅನುದಾನದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೯೯೪ (೧೮೩೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುರುವೇಕೆರೆ ಪಟ್ಟಣ ಪಂಚಾಯಿತಿಗೆ ಪ್ರಸಕ್ತ ಸಾಲಿನಲ್ಲಿ ಯಾವ ಯೋಜನೆಯಲ್ಲಿ ವಿಶೇಷ ಅನುದಾನ ನೀಡಲಾಗಿದೆ ;

(ಆ) ವಿಶೇಷ ಅನುದಾನದ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಯಾವುವು ;

(ಇ) ಸದರಿ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿದೆಯೇ ; ಪ್ರಾರಂಭಗೊಂಡಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲಾಗುವುದು ?

## ರಾಜ್ಯದಲ್ಲಿರುವ ಕೃಷಿ ಭೂಮಿ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೫ (೧೮೦೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೃಷಿ ಭೂಮಿಯ ವಿಸ್ತೀರ್ಣವೆಷ್ಟು ;

(ಆ) ರಾಜ್ಯದಲ್ಲಿ ಯಾವ ಯಾವ ಬೆಳೆಗಳನ್ನು ಎಷ್ಟು ಪ್ರದೇಶಗಳಲ್ಲಿ (ಹೆಕ್ಟೇರ್‌ಗಳಲ್ಲಿ) ಬೆಳೆಯಲಾಗುತ್ತಿದೆ ; (೨೦೦೮ ರಿಂದ ಇಲ್ಲಿಯವರೆಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಕೃಷಿ ಭೂಮಿ ವಿಸ್ತೀರ್ಣ ಕಡಿಮೆಯಾಗುತ್ತಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಈ) ಕೃಷಿ ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ? (ವಿವರ ನೀಡುವುದು)

## ರಾಜ್ಯದ ಜಲಾನಯನ ಪ್ರದೇಶಗಳಲ್ಲಿ ಬೆಳೆ ಬೆಳೆಯುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೬ (೧೮೦೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಜಲಾನಯನ ಪ್ರದೇಶಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಲಾಗುತ್ತಿದೆ ; (ಪ್ರದೇಶವಾರು ಹೆಕ್ಟೇರ್‌ಗಳಲ್ಲಿ ವಿವರ ನೀಡುವುದು)

(ಆ) ಜಲಾನಯನ ಪ್ರದೇಶಗಳಲ್ಲಿ ನಿರ್ದಿಷ್ಟ ಬೆಳೆಗಳನ್ನು ನಿರ್ದಿಷ್ಟ ವಿಸ್ತೀರ್ಣಗಳಲ್ಲಿ ಮಾತ್ರ ಬೆಳೆಯುಬೇಕೆಂದು ಸರ್ಕಾರ ಆದೇಶಿಸಿದೆಯೇ ; ಹಾಗಿದ್ದರೆ, ಬೆಳೆ ಪ್ರದೇಶದ ವಿವರ ನೀಡುವುದು)

(ಇ) ಸರ್ಕಾರ ನಿಗದಿಪಡಿಸಿದ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶಗಳಲ್ಲಿ ರೈತರು ಬೆಳೆಗಳನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇಂತಹ ಪ್ರಕ್ರಿಯೆಯಿಂದಾಗಿ ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ, ಇದನ್ನು ತಪ್ಪಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ಅಡಿಕೆ ಬೆಳೆ ಬೆಳೆಯುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೭ (೧೮೦೬) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರಸ್ತುತ ಯಾವ ಯಾವ ಭಾಗಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದೆ ; (ತಾಲ್ಲೂಕುವಾರು ಅಡಿಕೆ ಬೆಳೆಯುವ ಪ್ರದೇಶದ ವಿಸ್ತೀರ್ಣದ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ೯೦ರ ದಶಕದಲ್ಲಿ ಎಷ್ಟು ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿತ್ತು ; (ಪ್ರದೇಶವಾರು ಅಡಿಕೆ ಬೆಳೆಯ ವಿಸ್ತೀರ್ಣದ ವಿವರ ನೀಡುವುದು)

(ಇ) ಒಂದು ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆಯಲು ಬೇಕಾಗುವ ನೀರಿನ ಪ್ರಮಾಣವೆಷ್ಟು ; ಮತ್ತು ಒಟ್ಟು ಉತ್ಪಾದನೆಯ ವೆಚ್ಚವೆಷ್ಟು;

(ಈ) ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ರೈತರು ಬೆಳೆದ ಅಡಿಕೆಗೆ ಸರಿಯಾದ ದರ ದೊರೆಯುವಂತೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ವಿದ್ಯುತ್ ಅಭಾವ ಉಂಟಾಗಿರುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೮ (೧೮೨೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಿದ್ಯುತ್ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದ ವಿದ್ಯುತ್ ಅಭಾವವನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯದಲ್ಲಿ ಉಂಟಾಗಿರುವ ವಿದ್ಯುತ್ ಅಭಾವವನ್ನು ನೀಗಿಸಲು ಸರ್ಕಾರ ಬೇರೆ ಯಾವುದಾದರೂ ಮೂಲಗಳಿಂದ ವಿದ್ಯುತ್ ಉತ್ಪಾದಿಸಲು ಕ್ರಮ ಕೈಗೊಂಡಿದೆಯೇ ;

(ಈ) ಹಾಗಿದ್ದಲ್ಲಿ, ಯಾವ ಯಾವ ಮೂಲಗಳಿಂದ ಎಷ್ಟು ಪ್ರಮಾಣದ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ ? (ವಿವರ ನೀಡುವುದು)

## ವಿದ್ಯುತ್ ವಿತರಣಾ ಕೇಂದ್ರಗಳ ಸ್ಥಾಪನೆ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೯ (೧೭೭೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೂಡಿಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾಲಿ ಇರುವ ವಿದ್ಯುತ್ ವಿತರಣಾ ಕೇಂದ್ರಗಳೆಷ್ಟು ;

(ಆ) ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ವಿದ್ಯುತ್ ಸಮಸ್ಯೆಯನ್ನು ನಿವಾರಿಸಲು ಯಾವ ಯಾವ ಸ್ಥಳಗಳಲ್ಲಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ;

(ಇ) ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ೬೬/೧೧ ಕೆ.ವಿ. ವಿತರಣಾ ಕೇಂದ್ರದಲ್ಲಿ ೬೬/೩೩ ಕೆ.ವಿ. ೮ ಎಂ.ವಿ.ಎ. ಹೆಚ್ಚುವರಿ ಪರಿವರ್ತಕ ಕೇಂದ್ರ, ಜನ್ನಾಪುರದಲ್ಲಿ ೩೩/೧೧ ಕೆ.ವಿ. ಹೊಸ ವಿದ್ಯುತ್ ವಿತರಣಾ ಕೇಂದ್ರ, ಬಣಕಲ್‌ನಲ್ಲಿ ೩೩/೧೧ ಕೆ.ವಿ. ಹೊಸ ವಿದ್ಯುತ್ ವಿತರಣಾ ಕೇಂದ್ರ, ಆಲ್ದೂರಿನಲ್ಲಿ ೬೬/೩೩ ಕೆ.ವಿ. ೮ ಎಂ.ವಿ.ಎ.

ಹೆಚ್ಚುವರಿ ಪರಿವರ್ತಕ ಕೇಂದ್ರ, ಸದರಿ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆಯೇ ; ಮಂಜೂರು ಮಾಡಲಾಗಿದ್ದಲ್ಲಿ, ಕಾಮಗಾರಿ ಕೈಗೆತ್ತಿಕೊಳ್ಳದೆ ಇರುವುದಕ್ಕೆ ಕಾರಣವೇನು ;

(ಈ) ಚಿಕ್ಕಮಗಳೂರು ಮತ್ತು ಬಾಳೆಹೊನ್ನೂರು ಉಪ ಕೇಂದ್ರಕ್ಕೆ ಇರುವ ೬೬ ಕೆ.ವಿ. ಮಾರ್ಗದ ಉನ್ನತೀಕರಣದ ಕಾಮಗಾರಿ ೨೦೦೮ ರಲ್ಲಿಯೇ ಮಂಜೂರಾಗಿದ್ದು ಇಲ್ಲಿಯವರೆಗೂ ಕಾಮಗಾರಿ ಪೂರ್ಣಗೊಳಿಸದಿರುವುದಕ್ಕೆ ಇರುವ ತೊಡಕೇನು ; ತೊಡಕನ್ನು ನಿವಾರಿಸಿ ಸದರಿ ಕಾಮಗಾರಿಯನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಿ ಕಳಸ, ಆಲ್ದೂರು, ಶೃಂಗೇರಿ, ನರಸಿಂಹರಾಜಪುರ ಮತ್ತು ಕೊಪ್ಪ ತಾಲ್ಲೂಕಿನ ಪ್ರದೇಶಗಳಲ್ಲಿ ಇರುವ ಭೀಕರ ವಿದ್ಯುತ್ ಸಮಸ್ಯೆಯನ್ನು ಯಾವ ಕಾಲಮಿತಿಯೊಳಗೆ ನಿವಾರಿಸಲಾಗುವುದು?

## ಬೆಂಗಳೂರು ನಗರ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೦ (೧೮೦೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆಗಳ ಸಂಖ್ಯೆ ಎಷ್ಟು ;

(ಆ) ಕೃಷಿ ಉತ್ಪನ್ನಗಳ ಶೇಖರಣೆಗೆ ಯಾವ ಯಾವ ಭಾಗದಲ್ಲಿ ಕೃಷಿ ಗೋದಾಮುಗಳನ್ನು ನಿರ್ಮಿಸಲಾಗಿದೆ ;

(ಇ) ಕೃಷಿ ಉತ್ಪನ್ನಗಳಿಗೆ ಸೂಕ್ತ ದರ ನಿಗಧಿಪಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೧ (೧೭೮೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಪಂಪ್‌ಸೆಟ್‌ಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಒದಗಿಸಲು ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ ;

(ಆ) ೨೦೧೬–೧೭ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲಾದ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು;

(ಇ) ಕೃಷಿ ಚಟುವಟಿಕೆಗೆ ಎಷ್ಟು ಸಮಯ ೩ ಫೇಸ್ ವಿದ್ಯುತ್ ನೀಡಲಾಗುತ್ತದೆ ?

## ಹನಿ ನೀರಾವರಿ ಮೇಲಿನ ಸಬ್ಸಿಡಿ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೨ (೧೭೮೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ನೇ ಸಾಲಿನಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಹನಿ ನೀರಾವರಿ ಯೋಜನೆಯಡಿ ಎಷ್ಟು ಪ್ರಮಾಣದಲ್ಲಿ ಸಬ್ಸಿಡಿ ಮೂಲಕ ಪೈಪುಗಳನ್ನು ವಿತರಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ವಿತರಿಸಿದ್ದಲ್ಲಿ, ಇದಕ್ಕೆ ಇರುವ ಮಾನದಂಡಗಳೇನು ?

## ರೈತರ ಆತ್ಮಹತ್ಯೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) ಹಾಗೂ ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೦೦೩ (೧೬೮೮+೧೭೬೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಿಜವೆ ; ಈ ರೀತಿ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗಳೇನು ;

(ಆ) ಹಾಗಿದ್ದರೆ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ; ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ನೀಡಲಾದ ಪರಿಹಾರದ ಮೊತ್ತ ಎಷ್ಟು ; ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳು ಎಷ್ಟು ; ವಿಳಂಬಕ್ಕೆ ಕಾರಣವೇನು ; (ವಿವರವನ್ನು ವರ್ಷಾವಾರು ನೀಡುವುದು)

(ಇ) ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳೇನು ; (ವಿವರ ನೀಡುವುದು) ಅವುಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿದೆಯೇ ;

(ಈ) ರೈತರು ಆತ್ಮಹತ್ಯೆಗಳಂತಹ ದೃಢ ನಿರ್ಧಾರ ಕೈಗೊಳ್ಳಲು ಕಾರಣವೇನು ; ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಉ) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬ ವರ್ಗದವರಿಗೆ ಪಿಂಚಣಿ ನೀಡಲಾಗುತ್ತಿದೆಯೇ ?

## ಹನಿ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೦೪ (೧೬೯) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹನಿ ನೀರಾವರಿ ಯೋಜನೆ ಜಾರಿಯಲ್ಲಿದೆಯೇ ;

(ಆ) ಹಾಗಿದ್ದರೆ, ಈ ಯೋಜನೆಯನ್ನು ಅಳವಡಿಸಿಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; ಈ ಯೋಜನೆಯಲ್ಲಿ ರೈತರಿಗೆ ನೀಡುತ್ತಿರುವ ಸಹಾಯಧನದ ಮೊತ್ತವೆಷ್ಟು ; (ವಿವರ ನೀಡುವುದು)

(ಇ) ಫಲಾನುಭವಿಗಳು ಈ ಯೋಜನೆಯನ್ನು ಪಡೆಯಲು ಅನುಸರಿಸಬೇಕಾದ ಮಾನದಂಡಗಳೇನು ?

## ಪಶುಸಂಗೋಪನೆ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೦೫ (೧೮೦೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಶುಸಂಗೋಪನಾ ಇಲಾಖೆಯಲ್ಲಿರುವ ವಿವಿಧ ಯೋಜನೆಗಳು ಯಾವುವು ;

(ಆ) ಹಾಗಿದ್ದರೆ, ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಯಾವುವು ; ಈ ಯೋಜನೆಗಳನ್ನು ಪಡೆಯಲು ಫಲಾನುಭವಿಗಳು ಅನುಸರಿಸಬೇಕಾದ ನಿಯಮಗಳೇನು ; (ಯೋಜನಾವಾರು ವಿವರವನ್ನು ನೀಡುವುದು)

(ಇ) ಕಳೆದ ೪ ವರ್ಷಗಳಲ್ಲಿ ಆಯವ್ಯಯದ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು, ಯೋಜನಾವಾರು ಫಲಾನುಭವಿಗಳ ಮಾಹಿತಿ ನೀಡುವುದು)

## ತೋಟಗಾರಿಕಾ ಬೆಳೆಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೬ (೧೭೮೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಒಟ್ಟು ಜಮೀನು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇಲ್ಲಿ ಬೆಳೆಯಲಾಗುತ್ತಿರುವ ತೋಟಗಾರಿಕಾ ಬೆಳೆಗಳಾವುವು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಇ) ತೋಟಗಾರಿಕೆ ಬೆಳೆಯಿಂದ ಈ ಮೂರು ಜಿಲ್ಲೆಗಳ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಈ) ಈ ಮೂರು ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಫಾರಂ ಹೌಸ್‌ಗಳಿವೆ ; ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ? (ವಿವರ ನೀಡುವುದು)

## ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೭ (೧೭೮೬) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಯಾವಾಗಿನಿಂದ ಜಾರಿಗೆ ತರಲಾಯಿತು ; ಈ ಯೋಜನೆಯಡಿ ಯಾವ ಯಾವ ಬೆಳೆ ಬೆಳೆಯಲು ಸಹಾಯಧನ ಮಂಜೂರು ಮಾಡಲಾಗುತ್ತಿದೆ ; (ವಿವರ ನೀಡುವುದು)

(ಆ) ಈ ಯೋಜನೆಯಡಿ ಕಳೆದ ಸಾಲಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯಾವ ಯಾವ ಬೆಳೆ ಬೆಳೆಯಲು ಸಹಾಯಧನ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ ಸಾಲಿನಲ್ಲಿ ಈ ೩ ಜಿಲ್ಲೆಗಳಲ್ಲಿ ಸಹಾಯಧನ ಮಂಜೂರಾತಿಗೆ ಕೋರಿ ಬಂದ ಅರ್ಜಿಗಳು ಎಷ್ಟು ; ಮಂಜೂರಾತಿ ನೀಡಲಾದ ಅರ್ಜಿಗಳೆಷ್ಟು ; ಮಂಜೂರು ನೀಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; ಬಾಕಿ ಇಡಲು ಕಾರಣವೇನು ? (ಜಿಲ್ಲಾವಾರು ಹಾಗೂ ಫಲಾನುಭವಿಗಳವಾರು ಮಾಹಿತಿ ನೀಡುವುದು)

## ಪ್ರಧಾನಮಂತ್ರಿ ಕೃಷಿ ಸಂಚನ ಯೋಜನೆ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೮ (೧೭೮೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಧಾನಮಂತ್ರಿ ಕೃಷಿ ಸಂಚನ ಯೋಜನೆ (ಓ.ಐ) ಅಡಿಯಲ್ಲಿ ೨೦೧೬–೧೭ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಈ ಯೋಜನೆಯಡಿಯಲ್ಲಿ ಜಲಾನಯನ ಕೃಷಿ ಇಲಾಖೆಯಿಂದ ಕೈಗೊಂಡ ಕೆರೆಗಳಾವುವು ; (ಜಿಲ್ಲಾವಾರು, ಕೆರೆವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಯೋಜನೆಯಡಿಯಲ್ಲಿ ವಿವಿಧ ಜಿಲ್ಲೆಗಳಿಗೆ ರಾಜ್ಯ ಸರ್ಕಾರ ಹಂಚಿಕೆ ಮಾಡಿರುವ ಅನುದಾನ ಎಷ್ಟು ; (ಜಿಲ್ಲಾವಾರು, ಸಂಪೂರ್ಣ ವಿವರ ನೀಡುವುದು)

(ಇ) ಈವರೆಗೆ ಈ ಯೋಜನೆಯಡಿಯಲ್ಲಿ ಖರ್ಚಾಗಿರುವ ಅನುದಾನ ಎಷ್ಟು ? (ಜಿಲ್ಲಾವಾರು, ಕೆರೆಗಳವಾರು ಸಂಪೂರ್ಣ ವಿವರ ನೀಡುವುದು)

## ಹೈನುಗಾರಿಕೆ ಸೌಲಭ್ಯ ಹಾಗೂ ಅನುದಾನಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮ (೧೭೬೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಹೈನುಗಾರಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಹೈನುಗಾರಿಕೆಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು ; ಹಾಲಿನ ಸರಬರಾಜಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಹೈನುಗಾರಿಕೆ ಪ್ರಾರಂಭಿಸಲು ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ ಎಷ್ಟು ; ಕಳೆದ ಮೂರು ವರ್ಷಗಳಲ್ಲಿ ಈ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ; ಖರ್ಚಾಗಿರುವ ಅನುದಾನ ಎಷ್ಟು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಉ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಾಲಿನ ಉತ್ಪನ್ನ ಘಟಕವನ್ನು ಸ್ಥಾಪಿಸಲು ಸರ್ಕಾರ ಚಿಂತಿಸಿದೆಯೇ? (ವಿವರ ನೀಡುವುದು)

## ಕೆಮ್ಮಣ್ಣಗುಂಡಿ ಪ್ರದೇಶ ಅಭಿವೃದ್ಧಿ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧೦ (೧೮೧೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣಗುಂಡಿ ಪ್ರದೇಶ ಅಭಿವೃದ್ಧಿಯು ಕುಂಠಿತವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ; ಯಾವ ಇಲಾಖೆಯ ವತಿಯಿಂದ ಈ ಪ್ರದೇಶವನ್ನು ನಿರ್ವಹಣೆ ಮಾಡಲಾಗುತ್ತಿದೆ ;

(ಇ) ಕೆಮ್ಮಣ್ಣಗುಂಡಿಯಲ್ಲಿ ತೋಟಗಾರಿಕೆ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಗಳ ಜವಾಬ್ದಾರಿಗಳು ಏನು ; (ವಿವರ ನೀಡುವುದು)

(ಈ) ಕೆಮ್ಮಣ್ಣಗುಂಡಿ ಪ್ರದೇಶದ ಅಭಿವೃದ್ಧಿಗೆ ೨೦೧೨–೧೩ನೇ ಸಾಲಿನಿಂದ ೨೦೧೬–೧೭ರವರೆಗೆ ಬಿಡುಗಡೆಯಾದ ಅನುದಾನ ಎಷ್ಟು ; ಯಾವ ಯಾವ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿದೆ; ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಕಾಮಗಾರಿಕೆ ಬಳಸಿಕೊಳ್ಳಲಾಗಿದೆ ; ಬಾಕಿ ಇರುವ ಅನುದಾನ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಉತ್ಪಾದನಾ ಘಟಕಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧೧ (೧೮೧೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬೇಡಿಕೆಗೆ ಅನುಗುಣವಾಗಿ ಅವಶ್ಯಕತೆಯಿರುವ ಪಶು ಆಹಾರಗಳ ಪ್ರಮಾಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಸರ್ಕಾರಿ ಪಶು ಆಹಾರ ಉತ್ಪಾದನಾ ಘಟಕಗಳ ಸಂಖ್ಯೆ ಎಷ್ಟು ; ಅವು ಯಾವುವು ; ಅವುಗಳು ಉತ್ಪಾದಿಸುವ ಪಶು ಆಹಾರಗಳ ಪ್ರಮಾಣವೆಷ್ಟು ; (ಸಂಸ್ಥೆವಾರು ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿರುವ ಖಾಸಗಿ ಪಶು ಆಹಾರ ಉತ್ಪಾದನಾ ಘಟಕಗಳ ಸಂಖ್ಯೆ ಎಷ್ಟು ; ಅವು ಯಾವುವು ; ಅವುಗಳು ಉತ್ಪಾದಿಸುವ ಪಶು ಆಹಾರಗಳ ಪ್ರಮಾಣವೆಷ್ಟು ; (ಸಂಸ್ಥೆವಾರು, ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಪಶು ಆಹಾರಗಳ ಕೊರತೆಯ ಪ್ರಮಾಣವನ್ನು ಕಡಿತಗೊಳಿಸಲು ಜಿಲ್ಲೆಗೊಂದು ಪಶು ಆಹಾರ ಉತ್ಪಾದನಾ ಘಟವನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ, ಪರಿಹಾರವೇನು ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ತೋಟಗಾರಿಕಾ ಕಛೇರಿ ಸಿಬ್ಬಂದಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧೨ (೧೮೯೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ತೋಟಗಾರಿಕಾ ಇಲಾಖಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ

ಸಂಖ್ಯೆಎಷ್ಟು ; ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ತಾಲ್ಲೂಕುವಾರು, ಕಛೇರಿವಾರು, ಹುದ್ದೆವಾರು ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ತೋಟಗಾರಿಕಾ ಇಲಾಖೆಯಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸಾಧಿಸಿದ ಸಾಧನೆಗಳೇನು ; (ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು)

(ಇ) ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳು ಮತ್ತು ಕಾರ್ಯತಂತ್ರಗಳು ಯಾವುವು ?

## ರಾಜ್ಯ ರಸ್ತೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ನಿರ್ಮಿಸುವಾಗ ಅಗಲಗೊಳಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧೩ (೧೮೧೬) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ರಸ್ತೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಗಲೀಕರಣ ಮತ್ತು ಸುಧಾರಣೆಗಳ ಸಂದರ್ಭಗಳಲ್ಲಿ ಸರ್ಕಾರಿ ಜಮೀನುಗಳು ಇದ್ದಲ್ಲಿಯೂ ಸಹ ರಸ್ತೆಗಳನ್ನು ನೇರವಾಗಿ ಮಾಡಲು ಪ್ರಯತ್ನಿಸದೆ ಇರಲು ಕಾರಣವೇನು;

(ಆ) ಬೆಳೆಯುತ್ತಿರುವ ಗ್ರಾಮಗಳಲ್ಲಿ ಈ ರಸ್ತೆಗಳು ಹಿಂದಿನ ಗಾಡಿ ರಸ್ತೆ (Cord Roads) ಗಳಾಗಿದ್ದವು ಎನ್ನುವುದನ್ನು ಸದಾ ನೆನಪಿಸುವಂತಿರುವುದನ್ನು ಇಲಾಖೆ ಗಮನಿಸಿದೆಯೇ; ಗಮನಿಸಿದಲ್ಲಿ, ಇದರ ಪರಿಹಾರೋಪಾಯ ಮಾರ್ಗವನ್ನು ಕಂಡುಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು;

(ಇ) ಇಂಧನ ಸಮಯ, ಅವಘಡಗಳಿಗೆ ಪೂರಕವಾಗಿರತಕ್ಕಂತಹ ತಿರುವುಗಳನ್ನು ಕಡಿಮೆ ಮಾಡಿ ನೇರ ಸಂಚಾರಕ್ಕೆ ಅನುವು ಮಾಡಿಕೊಡುವ ಚಿಂತನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ, ಅಧಿಕ ವೆಚ್ಚದ ಹೊರೆಗಾಗಿ ನೇರ ರಸ್ತೆಗಳನ್ನು ಕೈಬಿಡುವುದು ಎಷ್ಟು ಸಮರ್ಥನೀಯ ಎನ್ನುವುದನ್ನು ಸರ್ಕಾರ ಚಿಂತಿಸುವುದೆ?

## ದಕ್ಷಿಣ ಕನ್ನಡ ಮತ್ತು ಉಡುಪಿ ನಗರಸಭೆ, ಪುರಭೆ, ಪಟ್ಟಣ ಪಂಚಾಯತಿಗಳಲ್ಲಿ ಮಂಜೂರಾದ ನಿವೇಶಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೧೪ (೧೮೧೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಕಳೆದ ಎರಡು ದಶಕಗಳಲ್ಲಿ ಮಂಜೂರು ಮಾಡಲಾದ ನಿವೇಶನಗಳೆಷ್ಟು; (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ವಾರು ಇದ್ದಲ್ಲಿ, ತಿಳಿಸುವುದು)

(ಆ) ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳು ಬಡ ಜನರ ಮೂಲಭೂತ ಅವಶ್ಯಕತೆಗಳಾದ ನಿವೇಶನವನ್ನು

ಖರೀದಿಸಿಯೂ ವಿತರಣೆ ಮಾಡದಿರುವುದು ಸರ್ಕಾರದ ಗಮನದಲ್ಲಿದೆಯೇ; ಇದಕ್ಕೆ ಪರಿಹಾರ ಕಂಡುಕೊಳ್ಳಲಾಗುವುದೆ; ಇಲ್ಲವಾದಲ್ಲಿ, ಕಾರಣವೇನು;

(ಇ) ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಮಳೆ ನೀರು ಕೊಯ್ಲು ಯೋಜನೆಯ ಅನುಷ್ಠಾನ ಮಾಡುವಾಗ ತಾಂತ್ರಿಕವಾಗಿ ಸಮರ್ಥಿಸುವ ದಾಖಲೆಗಳು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಇವೆಯೇ; ಇಲ್ಲವಾದಲ್ಲಿ, ಕಾಟಾಚಾರದ ಅನುಷ್ಠಾನವಾಗುವುದಿಲ್ಲವೇ?

## ರಾಜ್ಯದಲ್ಲಿ ಕೃಷಿ ವಿಶ್ವ ವಿದ್ಯಾನಿಲಯಗಳು ಸಾಧಿಸಿದ ಸಾಧನೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧೫ (೧೮೧೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಬೆಂಗಳೂರು, ಧಾರವಾಡ, ರಾಯಚೂರು ಮತ್ತು ಶಿವಮೊಗ್ಗ ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ಮಂಜೂರಾದ ಹುದ್ದೆಗಳೆಷ್ಟು; ಆ ಪೈಕಿ ಭರ್ತಿ ಮಾಡಲಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಈ ವಿಶ್ವ ವಿದ್ಯಾನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನಿಗಳೂ ಎಷ್ಟು; ಯಾರ್ಯಾರು; ವಿವಿಧ ದರ್ಜೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿಶ್ವವಿದ್ಯಾನಿಲಯವಾರು ವಿವರ ನೀಡುವುದು)

(ಇ) ಸದರಿ ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ೨೦೧೬–೧೭ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆಗೊಂಡ ಅನುದಾನವೆಷ್ಟು; ಆ ಪೈಕಿ ವೆಚ್ಚ ಮಾಡಲಾದ ಅನುದಾನವೆಷ್ಟು; (ತಿಂಗಳುವಾರು, ಲೆಕ್ಕ ಶೀರ್ಷಿಕೆವಾರು ವಿವರ ನೀಡುವುದು)

(ಈ) ಸದರಿ ಕೃಷಿ ವಿಶ್ವ ವಿದ್ಯಾನಿಲಯಗಳು ಕಳೆದ ಮೂರು ವರ್ಷಗಳಲ್ಲಿ ಸಾಧಿಸಿದ ಸಾಧನೆಗಳು ಯಾವುವು; ಹಾಗೂ ಸಂಶೋಧನೆಗಳು ಯಾವುವು? (ವಿವರವಾದ ಸಂಕ್ಷಿಪ್ತವಾಗಿ ಮಾಹಿತಿ ನೀಡುವುದು)

## ಮಾಗಡಿ ಮುಖ್ಯರಸ್ತೆಯಿಂದ ಮಾಗಡಿ ಪಟ್ಟಣದವರೆಗೆ ರಸ್ತೆ ಅಗಲೀಕರಣದ ಬಗ್ಗೆ

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೧೬ (೧೭೮೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರದ ಮಾಗಡಿ ಮುಖ್ಯರಸ್ತೆಯ ಸುಂಕದಕಟ್ಟೆಯಿಂದ ಮಾಗಡಿ ಪಟ್ಟಣದವರೆಗೆ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೇ ದಿನೇ ದಿನೇ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

(ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಅಗಲೀಕರಣ (ಚತುಷ್ಪಥ) ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ; ಯಾವ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಗುವುದು;

(ಇ) ಹಾಗೆ ಯಾವ ಕಾಲಮಿತಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು? (ಮಾಹಿತಿ ಒದಗಿಸುವುದು)

## ಒಳಚರಂಡಿ ನೀರು ಬಾವಿಗಳಲ್ಲಿ ಹರಿಯುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೧೭ (೧೮೨೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ವಾರ್ಡ್‌ಗಳಲ್ಲಿ ಒಳಚರಂಡಿ ನೀರು ಮುಂದೆ ಸಾಗದೆ ಬಾವಿಗಳಿಗೆ ಹರಿದು ಬಂದು ಸೇರುತ್ತಿದ್ದು, ನೀರು ಕಲುಷಿತಗೊಂಡು ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಲಿ ಬೇಸಿಗೆ ಕಾಲವು ಬರುತ್ತಿದ್ದು, ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಲಿದ್ದು, ಈ ಸಮಸ್ಯೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; ಇದಕ್ಕೆ ನಿಗಧಿಪಡಿಸಿರುವ ಕಾಲಮಿತಿ ಏನು;

(ಇ) ಒಳಚರಂಡಿ ನೀರು ಬಾವಿಗಳಿಗೆ ಹರಿಯದಂತೆ ಪರ್ಯಾಯವಾಗಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ;

(ಈ) ಈ ರೀತಿಯ ಸಮಸ್ಯೆಗಳು ಯಾವ ಯಾವ ವಾರ್ಡ್‌ಗಳಲ್ಲಿ ಕಂಡು ಬಂದಿವೆ; ಎಷ್ಟು ಬಾವಿಗಳು ಇದರಿಂದ ಹಾಳಾಗಿವೆ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿಯ ರಸ್ತೆಗಳು ಹಾಳಾಗಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೧೮ (೧೮೨೪) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿನ ರಸ್ತೆಗಳು ತುಂಬಾ ಹಾಳಾಗಿದ್ದು, ರಸ್ತೆಗಳ ಅಭಿವೃದ್ಧಿ, ದುರಸ್ಥಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ಕೆ ಪ್ರಸಕ್ತ ವರ್ಷದಲ್ಲಿ ನೀಡಿರುವ ಹಣವೆಷ್ಟು;

(ಆ) ಸದರಿ ಅನುದಾನದಲ್ಲಿ ಜಿಲ್ಲೆಯಲ್ಲಿ ಯಾವ್ಯಾವ ರಸ್ತೆಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗಿದೆ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಇ) ಜಿಲ್ಲೆಯಲ್ಲಿ ರಸ್ತೆಗಳನ್ನು ಸಂಪೂರ್ಣ ಹಾಳಾಗಿದ್ದು, ಜಿಲ್ಲೆಯ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ ಉಂಟಾಗಿರುವುದರಿಂದ, ರಸ್ತೆಗಳನ್ನು ತ್ವರಿತಗತಿಯಲ್ಲಿ ದುರಸ್ಥಿಪಡಿಸಲು ಸರ್ಕಾರದಿಂದ ಬಿಡುಗಡೆ ಮಾಡಲಾದ ಮೊತ್ತವೆಷ್ಟು? (ಮಾಹಿತಿ ಒದಗಿಸುವುದು)

## ಕೃಷಿ ಹೊಂಡಗಳನ್ನು ನಿರ್ಮಿಸುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೧೯ (೧೮೨೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಸರ್ಕಾರದ ಅತ್ಯುನ್ನತ್ತ ಯೋಜನೆಯಾದ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಈವರೆಗೂ ನಿರ್ಮಿಸಿರುವ ಕೃಷಿ ಹೊಂಡಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಸರ್ಕಾರ ಜಿಲ್ಲಾವಾರು ನಿಗಧಿಪಡಿಸಿರುವ ಕೃಷಿ ಹೊಂಡಗಳ ಸಂಖ್ಯೆ ಎಷ್ಟು; ಎರಡನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಇನ್ನು ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಬೇಕಿದೆ? (ಜಿಲ್ಲಾ ಹಾಗೂ ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

## ಸರ್ಕ್ಯೂಟ್ ಹೌಸ್ ಹಾಗೂ ಐ.ಬಿ.ಗಳ ನವೀಕರಣಗಳ ಬಗ್ಗೆ

**ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೦ (೧೮೪೪) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ; ಕಳೆದ ನಾಲ್ಕು ವರ್ಷಗಳಲ್ಲಿ ಯೋಜನೆ/ ಯೋಜನೇತರಗಳ ಬಾಬ್ತುಗಳಿಗೆ ಮಂಜೂರಾದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಸರ್ಕ್ಯೂಟ್ ಹೌಸ್ ಮತ್ತು ಐ.ಬಿ.ಗಳ ರಿಪೇರಿ ಮತ್ತು ನವೀಕರಣಕ್ಕೆ ಕಳೆದ ೪ ವರ್ಷಗಳಲ್ಲಿ ಮಂಜೂರಾದ ಅನುದಾನ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಕಾಮಗಾರಿವಾರು ಮಾಹಿತಿ ನೀಡುವುದು)

(ಇ) ಕ್ರಮ ೧೦ಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಸಾಮಾಗ್ರಿಗಳನ್ನು ಖರೀದಿಸಲಾಗಿದೆ; ಮತ್ತು ಇವುಗಳಿಗೆ ತಗುಲಿದ ವೆಚ್ಚ ಎಷ್ಟು; (ವಿವರವಾದ ಮಾಹಿತಿ ನೀಡುವುದು) ರಾಜ್ಯದಲ್ಲಿ ೪ ವರ್ಷಗಳಿಂದ ಎಷ್ಟು ಬ್ರಿಡ್ಜಸ್, ಕಲ್ವರ್ಟ, ಹಾರ್ಡ್ ಪ್ಯಾಸೇಜ್‌ಗಳನ್ನು ಮಾಡಲಾಗಿದೆ; (ಮಂಜೂರಾದ ಮತ್ತು ಖರ್ಚಾದ ವಿವರವಾದ ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

(ಈ) ಲೋಕೋಪಯೋಗಿ ಕಟ್ಟಡಗಳು ಮತ್ತು ಹಳೆ ಕಟ್ಟಡಗಳ ರಿಪೇರಿ, ಮತ್ತು ನವೀಕರಣಕ್ಕಾಗಿ ಮಂಜೂರಾದ ಅನುದಾನವೆಷ್ಟು ಮತ್ತು ವೆಚ್ಚ ಎಷ್ಟು? (ವಿವರವಾದ ಮಾಹಿತಿಯನ್ನು ನೀಡುವುದು)

## ಬಾಗಲಕೋಟೆ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳ ಬಗ್ಗೆ

**ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೧ (೧೮೪೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಹತ್ತು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ನಿರ್ಮಿಸಿರುವ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಸೇತುವೆಗಳ ಸಂಖ್ಯೆ ಎಷ್ಟು; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ಎಷ್ಟು ಗ್ರಾಮ, ನಗರ, ಪಟ್ಟಣಗಳಿಗೆ ಬೈಪಾಸ್ ರಸ್ತೆ ನಿರ್ಮಿಸುವ ಯೋಜನೆಯ ಪ್ರಸ್ತಾಪ ಸರ್ಕಾರದ ಮುಂದಿದೆ? (ಪ್ರತಿಯೊಂದು ಗ್ರಾಮ, ಪಟ್ಟಣ, ನಗರವಾರು ಸಂಪೂರ್ಣ ವಿವರ ನೀಡುವುದು)

## ರಾಯಚೂರು ವಿದ್ಯುತ್ ಉಪಕೇಂದ್ರಗಳ ಬಗ್ಗೆ

**ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೨ (೧೮೪೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿರುವ ೨೨೦ಕೆ.ವಿ ಮತ್ತು ೧೧೦ಕೆ.ವಿ ಮತ್ತು ೩೩ಕೆ.ವಿ. ಇನ್ನಿತರ ವಿದ್ಯುತ್ ಉಪಕೇಂದ್ರಗಳೆಷ್ಟು; (ತಾಲ್ಲೂಕುವಾರು, ಗ್ರಾಮವಾರು ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಕೇಂದ್ರಗಳಲ್ಲಿ ಮಂಜೂರಾದ ಮತ್ತು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; (ವೃಂದವಾರು ಮಾಹಿತಿ ನೀಡುವುದು) ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಯಾವ ಯಾವ ವರ್ಷದಲ್ಲಿ ಎಷ್ಟು ಇಂಧನ ಕೇಂದ್ರಗಳು ಮತ್ತು ಉಪಕೇಂದ್ರಗಳು ಮಂಜೂರಾಗಿವೆ; (ವಿವರವಾದ ಮಾಹಿತಿ ನೀಡುವುದು)

(ಈ) ರಾಯಚೂರು ಪವರ್ ಪ್ಲ್ಯಾಂಟ್‌ನಲ್ಲಿ ಮಂಜೂರಾದ ಹುದ್ದೆಗಳೆಷ್ಟು; ಕೊರತೆ ಇರುವ ಹುದ್ದೆಗಳೆಷ್ಟು; (ವೃಂದವಾರು ವಿವರವಾದ ಮಾಹಿತಿ ನೀಡುವುದು) ಹಾಗಿದ್ದಲ್ಲಿ, ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆಯೇ; (ವಿವರ ನೀಡುವುದು)

(ಉ) ಸದರಿ ವಿದ್ಯುತ್ ಶಕ್ತಿ ಕೇಂದ್ರಕ್ಕೆ ಒಂದು ತಿಂಗಳಿಗೆ ಎಷ್ಟು ಪ್ರಮಾಣದ ಕಲ್ಲಿದ್ದಲು ಬೇಕಾಗುತ್ತದೆ?

## ಬೈ–ಪಾಸ್ ರಸ್ತೆ ಕಾಮಗಾರಿ ನಿರ್ಮಾಣದ ಬಗ್ಗೆ

**ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೩ (೧೮೪೫) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯ ಮುಧೋಳ ಪಟ್ಟಣದ ಜೀರಗಾಳದಿಂದ ಮಾಲಾಪೂರ ಗೋಶಾಲೆವರೆಗೂ ಸಂಪರ್ಕಿಸುವ ಬೈ–ಪಾಸ್ ರಸ್ತೆ ಕಾಮಗಾರಿ ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಕ್ರಮ ವಹಿಸಿದೆಯೇ;

(ಆ) ಹಾಗಿದ್ದರೆ, ಈವರೆಗೂ ಎಷ್ಟು ಭೂಮಿಯನ್ನು ವಶಪಡಿಸಿಕೊಂಡಿದೆ; ಭೂಮಿ ಕಳೆದುಕೊಂಡವರಿಗೆ ಎಷ್ಟು ಪರಿಹಾರ ನೀಡಲಾಗಿದೆ;

(ಇ) ಈ ಯೋಜನೆಗೆ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ; ಮತ್ತು ಈವರೆಗೂ ಎಷ್ಟು ಖರ್ಚು ಮಾಡಲಾಗಿದೆ;

(ಈ) ಸದರಿ ಬೈ–ಪಾಸ್ ರಸ್ತೆ ಸಂಪರ್ಕಿಸುವ ಯೋಜನೆಯಲ್ಲಿ ತಾಂತ್ರಿಕ ತೊಂದರೆ ಇದೆಯೇ; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

(ಉ) ಸದರಿ ಯೋಜನೆ ಪೂರ್ಣಗೊಳ್ಳುವುದು ಯಾವಾಗ?

## ಕೃಷಿ ವಿಜ್ಞಾನಿ ಡಾ: ಎಸ್. ಭಾಸ್ಕರ್‌ರವರು ಅಡಿಕೆ ಮತ್ತು ತೆಂಗಿನ ಬೆಳೆಗೆ ಅವಿಷ್ಕರಿಸಿರುವ ಶೂನ್ಯ ನೀರಾವರಿ ಪದ್ಧತಿಯನ್ನು ಪ್ರೋತ್ಸಾಹಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೦೨೪ (೧೮೫೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಐಸಿಎಆರ್‌ನ ಕೃಷಿ ವಿಜ್ಞಾನಿ ಡಾ: ಎಸ್. ಭಾಸ್ಕರ್‌ರವರು ಅಡಿಕೆ ಮತ್ತು ತೆಂಗಿನ ಬೆಳೆಗೆ ಶೂನ್ಯ ನೀರಾವರಿ ಪದ್ದತಿಯನ್ನು ಅವಿಷ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಸಂಬಂಧ ಸದರಿ ಪದ್ಧತಿಯ ಅನುಕೂಲ ಮತ್ತು ಅನಾನುಕೂಲಗಳೇನು; (ವಿವರ ನೀಡುವುದು)

(ಇ) ಇದನ್ನು ರಾಜ್ಯಾದ್ಯಂತ ಕೃಷಿಕರು ಅಳವಡಿಸಿಕೊಂಡು ನೀರಿನ ಬಳಕೆ ಕಡಿಮೆ ಮಾಡಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಈ) ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ತಗಲುವ ವೆಚ್ಚಕ್ಕೆ ಸರ್ಕಾರದಿಂದ ಸಬ್ಸಿಡಿ ರೂಪದಲ್ಲಿ ರೈತರಿಗೆ ಸಹಾಯ ಮಾಡುವ ಕುರಿತು ಸರ್ಕಾರದ ನಿಲುವೇನು?

## ನಂದಿ ಗಿರಿಧಾಮದಲ್ಲಿ ತೋಟಗಾರಿಕಾ ಇಲಾಖೆಯ ಕೇಂದ್ರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೦೨೫ (೧೮೪೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಂದಿ ಗಿರಿಧಾಮದಲ್ಲಿ ತೋಟಗಾರಿಕಾ ಇಲಾಖೆಯಿಂದ ಸಾರ್ವಜನಿಕರು ಯಾವ ರೀತಿಯ ಪ್ರಯೋಜನ ಪಡೆದುಕೊಳ್ಳಬಹುದು ; ಸಾರ್ವಜನಿಕರ ಪ್ರಯೋಜನಕ್ಕಾಗಿ ಯಾವ ರೀತಿಯ ವ್ಯವಸ್ಥೆ ಮಾಡಲಾಗಿದೆ ;

(ಆ) ಕಳೆದ ಮೂರು ವರ್ಷಗಳಿಂದ ಭೇಟಿ ಕೊಟ್ಟ ವೀಕ್ಷಕರ ಸಂಖ್ಯೆ ಎಷ್ಟು ;

(ಇ) ನಂದಿ ಗಿರಿಧಾಮದಲ್ಲಿ ಸಾರ್ವಜನಿಕರಿಗೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಕುಡಿಯುವ ನೀರಿನ ಕೇಂದ್ರಗಳಿವೆ ; ಇವುಗಳಲ್ಲಿ ಎಷ್ಟು ನೀರಿನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ;

(ಈ) ವೀಕ್ಷಿಸಲು ಬರುವವರಿಗೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಶುದ್ಧ ಕುಡಿಯುವ ನೀರಿನ ಘಟಕವನ್ನು ನಂದಿ ಗಿರಿಧಾಮದಲ್ಲಿ ತೆರೆಯಲು ಸರ್ಕಾರ ಮುಂದಾಗುವುದೇ ?

## ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಆಗುವ ಕೊರತೆಯನ್ನು ನೀಗಿಸುವ ಕುರಿತು ಹಾಗೂ ವಿದ್ಯುತ್ ದರ ಹೆಚ್ಚಳಕ್ಕೆ ಮುಂದಾಗಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೦೨೬ (೧೮೪೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ವಿದ್ಯುತ್ ದರದಲ್ಲಿ ಎಷ್ಟು ಹೆಚ್ಚಳ ಮಾಡಲಾಗಿದೆ ; (ವರ್ಷವಾರು ವಿವರ ನೀಡುವುದು) ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಯೂನಿಟ್ ದರಗಳೆಷ್ಟು; (ವಿವರ ನೀಡುವುದು)

(ಆ) ಈ ಬಾರಿಯ ಬೇಸಿಗೆಯ ಬರಗಾಲದ ಹಿನ್ನಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದೇ ; (ವಿವರ ನೀಡುವುದು)

(ಇ) ವಿದ್ಯುತ್ ದರ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದರಲ್ಲಿ ಎಸ್ಕಾಂಗಳ ಪ್ರಸ್ತಾವನೆ ಏನು ; (ವಿವರ ನೀಡುವುದು) ಈ ಕುರಿತು ಸರ್ಕಾರದ ನಿಲುವೇನು ;

(ಈ) ವಿದ್ಯುತ್ ದರ ಏರಿಕೆಯಿಂದಾಗಿ ಸಾರ್ವಜನಿಕರ ಮೇಲೆ ಹೆಚ್ಚಿನ ಹೊರೆಯಾಗುವುದಿಲ್ಲವೇ ?

## ತೋಟಗಾರಿಕಾ ಬೆಳೆಗಳನ್ನು ಸಂರಕ್ಷಿಸಲು ಶೈತ್ಯಾಗಾರಗಳನ್ನು ನಿರ್ಮಿಸುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೦೨೭ (೧೮೪೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯಾವ ಯಾವ ತೋಟಗಾರಿಕೆ ಬೆಳೆಗಳಿಗೆ ಅವುಗಳನ್ನು ರಕ್ಷಿಸಿಡಲು ಶೈತ್ಯಾಗಾರಗಳ (Cold Storage) ಅಗತ್ಯವಿದೆ ; ಆ ರೀತಿಯ ತೋಟಗಾರಿಕಾ ಬೆಳೆಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ ; (ವಿವರ ನೀಡುವುದು)

(ಆ) ಪ್ರಸ್ತುತ ಯಾವ ಯಾವ ಜಿಲ್ಲೆಗಳಲ್ಲಿ ಸರ್ಕಾರಿ ಶೈತ್ಯಾಗಾರಗಳಿವೆ ; ಅವುಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ; ಇದರಿಂದ ಕೃಷಿಕರು ಯಾವ ರೀತಿಯ ಪ್ರಯೋಜನ ಪಡೆಯುತ್ತಿದ್ದಾರೆ ; (ವಿವರ ನೀಡುವುದು)

(ಇ) ಶೈತ್ಯಾಗಾರಗಳ ಕೊರತೆಯಿಂದ ವರ್ಷಕ್ಕೆ ಎಷ್ಟು ಪ್ರಮಾಣದ ನಷ್ಟವನ್ನು ರೈತರು ಅನುಭವಿಸುತ್ತಿದ್ದಾರೆ ? (ವಿವರ ನೀಡುವುದು)

## ರಾಜ್ಯದಲ್ಲಿ ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೦೨೮ (೧೮೫೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾಮಾನ್ಯವಾಗಿ ಪ್ರಸ್ತುತ ಉಪಯೋಗಿಸುತ್ತಿರುವ ಅಕ್ಕಿಯ ಇಳುವರಿಗೂ, ಅಕ್ಕಿಯ ಬೆಳೆ ಬೆಳೆಯಲು ನೀರಿನ ಅಗತ್ಯತೆಗೂ ಸಿರಿಧಾನ್ಯಗಳ ಅಕ್ಕಿಯ ಬೆಳೆಯ ಇಳುವರಿಗೂ ಮತ್ತು ನೀರಿನ ಅಗತ್ಯತೆಗೂ ಇರುವ ವ್ಯತ್ಯಾಸವೇನು ; (ವಿವರ ನೀಡುವುದು)

(ಆ) ಸಿರಿಧಾನ್ಯಗಳಲ್ಲಿ ಎಷ್ಟು ಬಗೆ ; ಸಾಮಾನ್ಯವಾಗಿ ಯಾವ ಪ್ರದೇಶದಲ್ಲಿ ಬೆಳೆಯಲಾಗುತ್ತದೆ ; (ವಿವರ ನೀಡುವುದು)

(ಇ) ಸಿರಿಧಾನ್ಯಗಳನ್ನು ಬೆಳೆಯುವುದರಿಂದ ರೈತರಿಗೆ ಹೆಚ್ಚಿನ ಲಾಭವಾಗುವುದೇ ;

(ಈ) ಈ ಕೃಷಿಯನ್ನು ಪ್ರೋತ್ಸಾಹಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ;

(ಉ) ಕಳೆದ ಮೂರು ವರ್ಷಗಳಿಂದ ಸದರಿ ಧಾನ್ಯಗಳ ಬೆಳೆಯ ಪ್ರಮಾಣವೇನು ? (ವಿವರ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಎ.ಪಿ.ಎಂ.ಸಿಯಿಂದಾದ ಕಾಮಗಾರಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೪೯ (೧೬೯೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೪ ವರ್ಷಗಳಲ್ಲಿ ಹಾವೇರಿ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಎ.ಪಿ.ಎಂ.ಸಿ.ಯಿಂದ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಆ) ಮೇಲಿನ ಅವಧಿಯಲ್ಲಿ ರಸ್ತೆಗಳ ಇತರೆ ಅಭಿವೃದ್ಧಿ ಕಾಮಗಾರಿಗಳ ಸುಧಾರಣೆಗೆ ಅಭಿವೃದ್ಧಿ ಕೈಗೊಂಡಿದ್ದಲ್ಲಿ, ಎಲ್ಲಿಂದ ಎಲ್ಲಿಯವರೆಗೆ, ಎಷ್ಟು ಕಿ.ಮೀನಷ್ಟು ಕೈಗೊಳ್ಳಲಾಗಿದೆ ; (ಅಭಿವೃದ್ಧಿಪಡಿಸಿದ ಕಿ.ಮೀ ಮಂಜೂರಾದ ವರ್ಷ, ಶೀರ್ಷಿಕೆ ಯೋಜನೆವಾರು ನಿಗದಿಪಡಿಸಿದ ಮೊತ್ತ, ಟೆಂಡರ್ ಮೊತ್ತ, ಕಾಮಗಾರಿ ಆರಂಭವಾದ ದಿನಾಂಕ, ಮುಗಿದ ದಿನಾಂಕ, ವೆಚ್ಚವಾದ ಮೊತ್ತಗಳ ಸಂಪೂರ್ಣ ವಿವರ ನೀಡುವುದು)

(ಇ) ಮುಂಬರುವ ವರ್ಷದಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಗಳೇನಾದರೂ ರೂಪಿಸಲಾಗಿದೆಯೇ ; ಇದ್ದಲ್ಲಿ, ಯಾವ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಹಾವೇರಿ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಅಭಿವೃದ್ಧಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೦ (೧೭೪೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಕೈಗೊಂಡ ಕ್ರಮಗಳೇನು ;

(ಆ) ಪ್ರತಿ ವರ್ಷ ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಗಳಿಂದ ಬರುವ ಆದಾಯ ಎಷ್ಟು ;

(ಇ) ಕೃಷಿ ಉತ್ಪನ್ನ ಮಾರುಕಟ್ಟೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯವನ್ನು ಪೂರೈಸಲು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು ;

(ಈ) ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿರುವ ಮಳಿಗೆಗಳು ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಉ) ಇದರಲ್ಲಿ ವ್ಯಾಪಾರಸ್ಥರಿಗೆ ಹಂಚಿರುವ ಮಳಿಗೆಗಳು ಎಷ್ಟು; ಅವುಗಳಲ್ಲಿ ಎಷ್ಟು ಮಳಿಗೆಗಳನ್ನು ಪ್ರಾರಂಭಿಸಲಾಗಿದೆ ? (ವಿವರ ನೀಡುವುದು)

## ಅಕ್ರಮ ವಿದ್ಯುತ್ ಸಂಪರ್ಕ ಪಡೆದವರಿಗೆ ಅಕ್ರಮ–ಸಕ್ರಮದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೧ (೧೭೭೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಕ್ರಮ ವಿದ್ಯುತ್ ಸಂಪರ್ಕ ಪಡೆದಿರುವ ರೈತರಿಗೆ ಅಕ್ರಮ–ಸಕ್ರಮ ಯೋಜನೆಯಡಿ ಸಕ್ರಮಗೊಳಿಸಲಾದ ರೈತರ ವಿದ್ಯುತ್ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪರಿವರ್ತಕಗಳನ್ನು ನಿಗಧಿತ ಅವಧಿಯಲ್ಲಿ ಅಳವಡಿಸದಿರುವುದರಿಂದ, ರೈತರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಹಾವೇರಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಜನರು ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಂಡಿರುತ್ತಾರೆ ; (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಇ) ಅಕ್ರಮ–ಸಕ್ರಮ ಯೋಜನೆಯಡಿ ಸಕ್ರಮಗೊಳಿಸಲಾದ ಎಷ್ಟು ಜನ ರೈತರಿಗೆ ವಿದ್ಯುತ್ ಪರಿವರ್ತಕಗಳನ್ನು ಒದಗಿಸಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು, ರೈತ ಫಲಾನುಭವಿಗಳ ಹೆಸರು ಸಹಿತ ಮಾಹಿತಿ ಒದಗಿಸುವುದು)

(ಈ) ೨೦೦೭ರಿಂದ ಇಲ್ಲಿಯವರೆಗೆ ಬಾಕಿ ಇರುವ ರೈತರಿಗೆ ಯಾವ ಕಾಲಮಿತಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸಲಾಗುವುದು ?

## ಹಾವೇರಿ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೨ (೧೭೮೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಸರಬರಾಜು ಮಾಡುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ;

(ಆ) ಈ ಜಿಲ್ಲೆಯಲ್ಲಿ ಪ್ರತಿ ದಿನಕ್ಕೆ ಎಷ್ಟು ಗಂಟೆಗಳ ಕಾಲ ೨ ಫೇಸ್ ಹಾಗೂ ೩ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ; (ಸ್ಟೇಷನ್‌ಗಳವಾರು ವಿವರ ನೀಡುವುದು)

(ಇ) ಈ ಭಾಗದಲ್ಲಿ ವಿದ್ಯುತ್‌ನ ಅಸಮರ್ಪಕ ಸರಬರಾಜಿಗೆ ಕಾರಣಗಳೇನು ;

(ಈ) ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗೆ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕುಪ್ಪಗಡ್ಡೆ ಗ್ರಾಮದಲ್ಲಿ ೧೧೦ ಕೆ.ವಿ. ಸ್ಟೇಷನ್ ಪ್ರಾರಂಭಿಸುವ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೩ (೧೭೬೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ, ಹಾಯ, ನೆಗವಾಡಿ, ತೂಡನೂರು, ಚಿಕ್ಕಬೂರು, ಶಿರಿನಾಯಕನಕೊಪ್ಪ, ಕುಪ್ಪಗಡ್ಡೆ ಗ್ರಾಮಗಳೂ ಸೇರಿದಂತೆ ಫೀಡರ್ (ಟ್ರಾನ್ಸ್‌ಫಾರ್ಮರ್)ಗಳಿಗೆ ಎಕ್ಸ್‌ಪ್ರೆಸ್ ಮಾರ್ಗ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಗಳಿಗೆ ಅನುದಾನ ಎಷ್ಟು ಬಿಡುಗಡೆ ಮಾಡಲಾಗಿರುವುದು ;

(ಇ) ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು ಯಾವಾಗ ;

(ಈ) ಕುಪ್ಪಗಡ್ಡೆ ಗ್ರಾಮದಲ್ಲಿ ೧೧೦ ಕೆ.ವಿ. ಸ್ಟೇಷನ್ ಪ್ರಾರಂಭಿಸುವ ಕಾಮಗಾರಿಯನ್ನು ಆರಂಭಿಸಲಾಗುವುದು ಯಾವಾಗ ; ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳ್ಳಲಿದೆ ;

(ಉ) ಬೆಟ್ಟದಕೂರ್ಲಿ ಗ್ರಾಮದ ರೈತರ ಜಮೀನುಗಳಿಗೆ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೨೦೩೪ (೧೭೬೪) ಮಾನ್ಯ ಲೋಕೋಪಯೋಗಿ, ಬಂದರು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದರಿಂದ ಪ್ರಯಾಣಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ಅಗಲೀಕರಣ ಮಾಡುವ ಬಗ್ಗೆ ನಿರ್ಧರಿಸಲಾಗಿದೆಯೇ ;

(ಈ) ಮಾಡಿದ್ದಲ್ಲಿ, ಕಾಮಗಾರಿ ಯಾವಾಗ ಆರಂಭವಾಗುತ್ತದೆ ; ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

(ಉ) ಕಾಮಗಾರಿ ಮುಕ್ತಾಯಗೊಳ್ಳುವುದು ಯಾವಾಗ ?

## ರಾಜ್ಯದಲ್ಲಿ ಮಾರಾಟವಾಗುತ್ತಿರುವ ನಕಲಿ ಕೀಟನಾಶಕಗಳ ತಡೆಗಟ್ಟುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೩೫ (೧೮೨೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಾರಾಟವಾಗುತ್ತಿರುವ ಕೃಷಿಗೆ ಬಳಸುವ ಕೀಟನಾಶಕಗಳ ಕುರಿತು ಸರ್ಕಾರದಲ್ಲಿನ ಮಾನದಂಡಗಳೇನು ; ಈ ಕೀಟನಾಶಕಗಳನ್ನು ಹೆಚ್ಚು ಬಳಸದಂತೆ ತಡೆಯಲು ಸರ್ಕಾರದ ಕ್ರಮಗಳೇನು ;

(ಆ) ಈ ಕೀಟನಾಶಕಗಳನ್ನು ತಯಾರು ಮಾಡಲು ಇರುವ ಅಧಿಕೃತ ಔಷಧಿ ಕಂಪನಿಗಳು ಎಷ್ಟು ; (ಅವುಗಳ ಹೆಸರಿನೊಂದಿಗೆ ವಿವರ ನೀಡುವುದು) ನಕಲಿ ಔಷಧಿಗಳನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು ;

(ಇ) ಈ ಕೀಟನಾಶಕಗಳ ಬಳಕೆಯಿಂದ ರಾಜ್ಯದ ಕೃಷಿ ಭೂಮಿಯ ಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆ ಕೃಷಿ ಇಲಾಖೆ ಯಾವುದಾದರೂ ಸರ್ವೆ ಕಾರ್ಯವನ್ನು ಮಾಡಿದೆಯೇ ; ಇದ್ದಲ್ಲಿ, ವಿವರ ನೀಡುವುದು ; ಇಲ್ಲವಾದಲ್ಲಿ, ಇದರ ಕುರಿತು ಸರ್ಕಾರದ ನಿಲುವೇನು ?

## ಕೊಡಗು ಜಿಲ್ಲೆಯಲ್ಲಿ ಸಾವಯವ ತೋಟಗಾರಿಕೆ ಬೆಳೆಗಳ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೬ (೧೮೮೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಪ್ರಮುಖವಾಗಿ ಬೆಳೆಯುವ ತೋಟಗಾರಿಕಾ ಬೆಳೆಗಳು ಯಾವುವು ;

(ಆ) ಸದರಿ ತೋಟಗಾರಿಕಾ ಬೆಳೆಗಳನ್ನು, ಎಷ್ಟು ವಿಸ್ತೀರ್ಣದಲ್ಲಿ ಸಾವಯವ ಕೃಷಿ ಪದ್ಧತಿಗೆ ಅಳವಡಿಸಲಾಗಿದೆ ;

(ಇ) ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈತರಿಗೆ ನೀಡುತ್ತಿರುವ ತರಬೇತಿ ಮತ್ತು ಪ್ರೋತ್ಸಾಹ ಹಾಗೂ ಸಹಾಯಧನದ ಸಂಪೂರ್ಣ ವಿವರ ನೀಡುವುದು ;

(ಈ) ಸಾವಯವ ಕೃಷಿ ತೋಟಗಾರಿಕಾ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯುವಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೩೭ (೧೮೭೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಯಾವುವು ; (ಸಂಪೂರ್ಣ ಪಟ್ಟಿ ನೀಡುವುದು)

(ಆ) ಅವುಗಳಲ್ಲಿ ಲಾಭದಲ್ಲಿರುವ ಮತ್ತು ನಷ್ಟದಲ್ಲಿರುವ ಉದ್ದಿಮೆಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಇ) ನಷ್ಟದಲ್ಲಿರುವ ಉದ್ದಿಮೆಗಳಿಗೆ ಪುನಃಶ್ಚೇತನ/ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಉದ್ದಿಮೆವಾರು ಪ್ರತ್ಯೇಕ ವಿವರ ನೀಡುವುದು)

(ಈ) ನಷ್ಟದಲ್ಲಿರುವ ಉದ್ದಿಮೆಗಳಲ್ಲಿನ ನೌಕರ ವರ್ಗದವರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮಂಗಳೂರು ವಿಮಾನ ನಿಲ್ದಾಣದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೩೮ (೧೭೬೮) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ವಿಮಾನ ನಿಲ್ದಾಣದ ಸಂಪರ್ಕ ರಸ್ತೆ ಮರಕಡದಿಂದ ವಿಮಾನ ನಿಲ್ದಾಣದವರೆಗೆ ನಾಲ್ಕುಪಥ ರಸ್ತೆಯನ್ನಾಗಿ ಮಾರ್ಪಡಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ರಸ್ತೆಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು ಯಾವಾಗ;

(ಆ) ಮರವೂರು ಬ್ರಿಡ್ಜ್ ರಚಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

(ಇ) ವಿಮಾನ ನಿಲ್ದಾಣದ ರಸ್ತೆಯ ದಾರಿಯಲ್ಲಿರುವ ರೈಲ್ವೆ ಅಂಡರ್‌ಬ್ರಿಡ್ಜ್‌ನ್ನು ವಿಸ್ತರಿಸಲು (ಅಗಲಗೊಳಿಸಲು) ರೈಲ್ವೆ ಇಲಾಖೆಯೊಂದಿಗೆ ಚರ್ಚಿಸಲಾಗಿದೆಯೇ ? (ವಿವರ ನೀಡುವುದು)

## ಅಡಿಕೆ ಮಂಡಳಿ ರಚಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೩೯ (೧೭೬೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಡಿಕೆ ಮಂಡಳಿ ರಚಿಸುವ ಬಗ್ಗೆ ತೋಟಗಾರಿಕೆ ವಿಶ್ವವಿದ್ಯಾನಿಲಯ ನೀಡಿದ ವರದಿಯನ್ನು ಇಲಾಖೆ ಪರಿಗಣಿಸಿದೆಯೇ ; ಪರಿಗಣಿಸಿದ್ದಲ್ಲಿ, ಅಡಿಕೆ ಮಂಡಳಿಯನ್ನು ರಚಿಸಲಾಗುವುದು ಯಾವಾಗ ; (ವಿವರ ನೀಡುವುದು)

(ಆ) ಅಡಿಕೆ ಬೆಳೆಗಾರರ ಕೃಷಿ ಸಾಲ ಮನ್ನಾ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕೇಂದ್ರ ಸರ್ಕಾರದ ವತಿಯಿಂದ ಅಡಿಕೆ ಬೆಳಗಾರರ ಸಾಲ ಮನ್ನಾ ಕುರಿತು ಕೈಗೊಂಡಿರುವ ಕ್ರಮಗಳೇನು ;

(ಈ) ರಬ್ಬರ್ ಬೆಲೆ ಕುಸಿತಗೊಂಡಿದ್ದಲ್ಲಿ, ಕೇರಳ ಮಾದರಿಯಲ್ಲಿ ಪರಿಹಾರ ನೀಡಬೇಕೆಂಬ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ರಬ್ಬರ್ ಬೆಳೆಗಾರರಿಗೆ ಬೆಂಬಲ ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಸರ್ಕಾರದ ನಿಲುವೇನು ? (ವಿವರ ನೀಡುವುದು)

## ರಾಜ್ಯದಲ್ಲಿ ಸೌರಶಕ್ತಿ ಉತ್ಪಾದಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೪೦ (೧೭೬೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸೌರಶಕ್ತಿ ಮುಖಾಂತರ ಉತ್ಪಾದಿಸುವ ವಿದ್ಯುತ್ ಪ್ರಮಾಣ ಎಷ್ಟು ;

(ಆ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಸೌರವಿದ್ಯುತ್ ಉತ್ಪಾದಿಸಲು ಹಾಕಿಕೊಂಡಿರುವ ಗುರಿ ಎಷ್ಟು ; ಉತ್ಪಾದಿಸುವ ಪ್ರಮಾಣ ಎಷ್ಟು ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಸೌರಶಕ್ತಿ ಉತ್ಪಾದನೆಗೆ ಹಮ್ಮಿಕೊಂಡಿರುವ ಯೋಜನೆಗಳು ಎಷ್ಟು ; ಆ ಪೈಕಿ ಎಷ್ಟು ಯೋಜನೆಗಳಿಗೆ ಅನುದಾನವನ್ನು ಒದಗಿಸಲಾಗಿದೆ ; ಇದಕ್ಕೆ ತಗಲುವ ವೆಚ್ಚ ಎಷ್ಟು ; ಯಾರ ಜೊತೆ ಕರಾರು ಮಾಡಿಕೊಳ್ಳಲಾಗಿದೆ ; (ಯೋಜನೆವಾರು ವಿವರ ನೀಡುವುದು)

(ಈ) ಸೌರಶಕ್ತಿ ಮತ್ತು ಕಡಿಮೆ ವಿದ್ಯುತ್ ಬಳಕೆಯಾಗುವ ಬಲ್ಬ್‌ಗಳನ್ನು ಪ್ರೋತ್ಸಾಹಿಸಲು ಇಲಾಖೆ ಮುಂದಿರುವ ಕಾರ್ಯಕ್ರಮಗಳಾವುವು; (ವಿವರ ನೀಡುವುದು)

(ಉ) ಕಡಿಮೆ ವಿದ್ಯುತ್‌ನಲ್ಲಿ ಉರಿಯುವ ಬಲ್ಬ್‌ಗಳನ್ನು ಇಲಾಖಾ ವತಿಯಿಂದ ಸಾರ್ವಜನಿಕರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ; (ವಿವರ ಒದಗಿಸುವುದು) ಬಲ್ಬ್‌ಗಳನ್ನು ಒದಗಿಸಲು ಇಲಾಖೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; ಬಲ್ಬ್‌ಗೆ ತಗಲುವ ವೆಚ್ಚ ಎಷ್ಟು ? (ವಿವರ ನೀಡುವುದು)

## ಮಂಗಳೂರು ಬೈಕಂಪಾಡಿಯಲ್ಲಿರುವ ಎ.ಪಿ.ಎಂ.ಸಿ.ನಲ್ಲಿರುವ ವರ್ತಕರ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೪೧ (೧೭೬೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ಬೈಕಂಪಾಡಿಯಲ್ಲಿರುವ ಎ.ಪಿ.ಎಂ.ಸಿ.ನಲ್ಲಿ ಎಷ್ಟು ವರ್ತಕರು ಕಾರ್ಯನಿರ್ವಹಿಸುತ್ತಿದ್ದಾರೆ ; ಇಲ್ಲದಿದ್ದಲ್ಲಿ, ಕಾರಣಗಳೇನು; ವರ್ತಕರಿಗೆ ಮಾರುಕಟ್ಟೆಯಲ್ಲಿ ವ್ಯವಹರಿಸುವಂತೆ ಸೂಚಿಸಲಾಗುವುದು ಯಾವಾಗ ;

(ಆ) ಬೈಕಂಪಾಡಿ ಮಾರುಕಟ್ಟೆಯಲ್ಲಿ ನಿರ್ಮಿಸಿದ ಗೋಡಾನ್‌ಗಳು ಬಳಕೆಯಾಗದೆ ದುಸ್ಥಿತಿಯಲ್ಲಿರಲು ಕಾರಣಗಳೇನು ; (ವಿವರ ನೀಡುವುದು)

(ಇ) ಮಾರುಕಟ್ಟೆ ಗೋಡಾನ್‌ಗಳಿಂದ ನಿರೀಕ್ಷಿಸಿದ ಆದಾಯ ಎಷ್ಟು ; ಪ್ರಸ್ತುತ ಸಿಗುತ್ತಿರುವ ಆದಾಯ ಎಷ್ಟು ; (ವಿವರ ನೀಡುವುದು)

(ಈ) ಸದರಿ ಮಾರುಕಟ್ಟೆಯಲ್ಲಿ ಎಷ್ಟು ವರ್ತಕರಿಗೆ ವ್ಯವಹಾರ ನಡೆಸಲು ಅವಕಾಶ ಕಲ್ಪಿಸಲಾಗಿದೆ ?

## ಮಂಗಳೂರು ನಗರದ ನಂತೂರು ಜಂಕ್ಷನ್ ನಾಲ್ಕುಪಥ ರಸ್ತೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೪೨ (೧೭೬೪) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ನಗರದ ನಂತೂರು ಜಂಕ್ಷನ್ ನಾಲ್ಕುಪಥ ರಸ್ತೆ ಕಾಮಗಾರಿ ಸ್ಥಗಿತಗೊಂಡು ಮೂರು ವರ್ಷಗಳಾದರೂ ಪ್ರಾರಂಭಿಸದೆ ಇರಲು ಕಾರಣವೇನು ;

(ಆ) ಅಂಡರ್‌ಬ್ರಿಡ್ಜ್ ಪ್ರಸ್ತಾವನೆ ಯಾವ ಹಂತದಲ್ಲಿದೆ ; ನಂತೂರು ಜಂಕ್ಷನ್‌ನಲ್ಲಿ ಅನೇಕ ಅಪಘಾತಗಳು ನಡೆಯುತ್ತಿದ್ದು, ಫ್ಲೈಓವರ್ ರಸ್ತೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವ ಹಂತದಲ್ಲಿದೆ ; ಇದರ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು)

(ಇ) ನಗರದ ಕೋರ್ಟ್ ಸಂಪರ್ಕ ರಸ್ತೆಗೆ ಕಲ್ಪಿಸುವ ರಸ್ತೆ ಕಾಮಗಾರಿ ಪೂರ್ಣಗೊಳ್ಳಲಾಗುವುದು ಯಾವಾಗ ; ಈ ರಸ್ತೆಗೆ ಮೀಸಲಿಟ್ಟ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಜಿಲ್ಲೆಗೆ ೨೦೧೬–೧೭ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು ? (ವಿವರ ಒದಗಿಸುವುದು)

## ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೩ (೧೭೯೬) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ – ಚಿಕ್ಕಬಳ್ಳಾಪುರ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ, ಬಿಡುಗಡೆಯಾದ ಅನುದಾನವೆಷ್ಟು ; ಆ ಪೈಕಿ ಖರ್ಚು ಮಾಡಲಾದ ಹಣವೆಷ್ಟು ; (ತಾಲ್ಲೂಕುವಾರು, ವರ್ಷವಾರು ವಿವರಗಳನ್ನು ನೀಡುವುದು)

(ಆ) ಈ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಾವುವು ; (ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನದಲ್ಲಿ ಇದುವರೆಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳಾವುವು ; (ವರ್ಷವಾರು, ಕಾಮಗಾರಿಗಳವಾರು ವಿವರಗಳನ್ನು ಒದಗಿಸುವುದು)

(ಈ) ಈ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇರುವ ಕಾಲಮಿತಿ ಏನು ? (ಮಾಹಿತಿ ನೀಡುವುದು)

## ಸೋಲಾರ್ ವಿದ್ಯುತ್ ಉತ್ಪಾದನೆಗೆ ಆಯ್ಕೆಗೊಂಡಿರುವ ತಾಲ್ಲೂಕುಗಳ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೪ (೧೭೯೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಆಯ್ಕೆಗೊಂಡಿರುವ ತಾಲ್ಲೂಕುಗಳಾವುವು ; (ವಿವರಗಳನ್ನು ನೀಡುವುದು)

(ಆ) ಈ ಯೋಜನೆಗೆ ಸರ್ಕಾರವು ನಿಗದಿಪಡಿಸಿ ಬಿಡುಗಡೆ ಮಾಡಿರುವ ಹಣವೆಷ್ಟು ; ಇದುವರೆವಿಗೂ ಖರ್ಚಾದ ಹಣವೆಷ್ಟು ; ಯಾವ ಯಾವ ಕೇಂದ್ರಗಳಲ್ಲಿ ಈ ಯೋಜನೆಯಡಿ ಕಾಮಗಾರಿಗಳು ಪ್ರಾರಂಭವಾಗಿವೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಗೆ ಸರ್ಕಾರ ನಿಗಧಿಪಡಿಸಿರುವ ಭೂಮಿಯ ವಿಸ್ತೀರ್ಣವೆಷ್ಟು ; ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆ ಗುರಿ ಹೊಂದಲಾಗಿದೆ ? (ಘಟಕವಾರು ಸಂಪೂರ್ಣ ಮಾಹಿತಿ ನೀಡುವುದು)

## ಮಾವು ಮತ್ತು ದ್ರಾಕ್ಷಿ ಬೆಳೆಗಳ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೫ (೧೭೭೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು ಮತ್ತು ದ್ರಾಕ್ಷಿ ಬೆಳೆಗಳನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳೆಗಳಿಗೆ ಸೂಕ್ತ ಮಾರುಕಟ್ಟೆಗಳ ವ್ಯವಸ್ಥೆ ಕಲ್ಪಿಸಲಾಗಿದೆಯೇ ; (ಮಾಹಿತಿ ನೀಡುವುದು)

(ಇ) ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ಬೆಳೆದ ದ್ರಾಕ್ಷಿ ಮತ್ತು ಮಾವು ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತರು ತೊಂದರೆಯನ್ನು ಅನುಭವಿಸುತ್ತಿದ್ದು, ಸರಿಯಾದ ಬೆಲೆ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಸ್ಥಳೀಯ ಸಂಸ್ಥೆಗಳಿಗೆ ಯು.ಜಿ.ಡಿ. ಕಾಮಗಾರಿಗಳಿಗೆ ಬಿಡುಗಡೆ ಮಾಡಲಾದ ಹಣದ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೪೬ (೧೮೦೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಮನಗರ ಹಾಗೂ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಯು.ಜಿ.ಡಿ. ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಖರ್ಚು ಮಾಡಲಾದ ಹಣವೆಷ್ಟು ; ಖರ್ಚಾಗದೆ ಉಳಿದ ಹಣವೆಷ್ಟು ; ಕಾಮಗಾರಿಗಳ ಇತ್ತೀಚಿನ ಪ್ರಗತಿಯ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಈ ಯೋಜನೆಯ ಕಾಮಗಾರಿಗಳನ್ನು ಯಾವ ಯಾವ ಸಂಸ್ಥೆ/ಗುತ್ತಿಗೆದಾರರಿಗೆ ವಹಿಸಲಾಗಿದೆ ; ಗುತ್ತಿಗೆದಾರರ ವಿಳಾಸ ಸಹಿತ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಹಾಗಿದ್ದಲ್ಲಿ, ಈ ಯು.ಜಿ.ಡಿ. ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಯಿತು ; ಮತ್ತು ಪೂರ್ಣಗೊಳಿಸಲು ಗೊತ್ತು ಪಡಿಸಲಾಗಿರುವ ಕಾಲಮಿತಿ ಎಷ್ಟು ;

(ಈ) ಯು.ಜಿ.ಡಿ. ಕಾಮಗಾರಿಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಯು.ಜಿ.ಡಿ. ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೭ (೧೮೬೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಕಂದಾಯ ವಿಭಾಗ ವ್ಯಾಪ್ತಿಯಲ್ಲಿ ಬರುವ ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ಕೃಷಿ ಇಲಾಖೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಛೇರಿಗಳಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಖಾಲಿ ಉಳಿದಿರುವ ಹುದ್ದೆಗಳ ಭರ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಮಗ್ರ ಮಾಹಿತಿ ನೀಡುವುದು)

(ಈ) ಹುದ್ದೆಗಳು ಖಾಲಿ ಉಳಿದಿರುವುದರಿಂದ ಯೋಜನೆಗಳ ಅನುಷ್ಠಾನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ನಿಟ್ಟಿನಲ್ಲಿ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ?

## ಹೈನುಗಾರಿಕೆಗೆ ಉತ್ತೇಜನ ನೀಡುವ ಬಗ್ಗೆ

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೮ (೧೮೬೩) ಮಾನ್ಯ ಪಶುಸಂಗೋಪನೆ ಮತ್ತ ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ, ಯಾದಗಿರಿ ಹಾಗೂ ಬೀದರ್ ಜಿಲ್ಲೆಯಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಮುಂದಾಗುವುದೇ ;

(ಆ) ಹೈನುಗಾರಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಮಗ್ರ ಮಾಹಿತಿ ನೀಡುವುದು)

(ಇ) ಈ ಎರಡು ಜಿಲ್ಲೆಗಳಲ್ಲಿರುವ ಹಾಲಿನ ಬೇಡಿಕೆ ಎಷ್ಟು ; ಈಗ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಹಾಲಿನ ಕೊರತೆಯಾಗುತ್ತಿದ್ದರೆ, ಪರ್ಯಾಯ ಮಾರ್ಗಗಳೇನು? (ವಿವರ ನೀಡುವುದು)

## ತೋಟಗಾರಿಕೆ ಕಾಲೇಜು ಪ್ರಾರಂಭಿಸುವ ಬಗ್ಗೆ

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೯ (೧೮೬೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ತೋಟಗಾರಿಕೆ ಕಾಲೇಜು ಪ್ರಾರಂಭಿಸಬೇಕೆಂಬ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಕುರಿತು ಬಾಗಲಕೋಟೆಯಲ್ಲಿರುವ ತೋಟಗಾರಿಕಾ ವಿಶ್ವವಿದ್ಯಾಲಯವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ; ಸಲ್ಲಿಸಿದ್ದರೆ, ವಿವರ ನೀಡುವುದು ;

(ಇ) ಪ್ರಸ್ತಾವನೆ ಸ್ವೀಕರಿಸಿ, ಕಲಬುರಗಿಯಲ್ಲಿ ತೋಟಗಾರಿಕೆ ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ ? (ಮಾಹಿತಿ ನೀಡುವುದು)

## ಪೌರ ಕಾರ್ಮಿಕರಿಗೆ ಹೆಚ್ಚುವರಿ ವೇತನ ಪಾವತಿ ಬಗ್ಗೆ

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೫೦ (೧೮೮೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ ಎಲ್ಲಾ ಗುತ್ತಿಗೆ ಪೌರ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಹೆಚ್ಚಳ ಮಾಡಿ ಆದೇಶ ಹೊರಡಿಸಿದ್ದು, ಆದೇಶ ಹೊರಡಿಸಿ ೬ ತಿಂಗಳು ಕಳೆದರೂ ಹೆಚ್ಚುವರಿ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ತಕ್ಷಣ ಹೆಚ್ಚುವರಿ ವೇತನ ಪಾವತಿಸಲು ಕ್ರಮ ಕೈಗೊಳ್ಳುವುದೆ ; ಬರದಿದ್ದಲ್ಲಿ, ಕಾಲಮಿತಿ ನಿಗಧಿಪಡಿಸಿ ಪಾವತಿಸಲಾಗುವುದೆ ;

(ಇ) ಪೌರ ಕಾರ್ಮಿಕರನ್ನು ಒದಗಿಸುವ ಗುತ್ತಿಗೆದಾರರು ಕಾರ್ಮಿಕ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದ್ದು, ಅಂತಹ ಗುತ್ತಿಗೆದಾರರಿಗೆ ನೀಡಲಾಗುತ್ತಿದೆಯೇ ? (ವಿವರ ನೀಡುವುದು)

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0317/900 ಪ್ರತಿಗಳು/18–03–2017